# ಅಪರಂಜಿ

ತಿಳಿನಗೆಯ ಕಾರಂಜಿ

ಫೆಬ್ರವರಿ - 2016



ಜಿರಳೆ ಉವಾಚ: ನೀನೊಬ್ಬ ಹೇಡಿ. ನಿನ್ನ ಹೆಂಡತಿ ನನಗೆ ಹೆದರ್ತಾಳೆ
ನಿನಗಲ್ಲ ಎಂದು ನನ್ನ ಮೇಲೆ ಅಸೂಯೆ ಪಟ್ಟು
ನನ್ನನ್ನು ಕೊಲ್ಲಲು ಹೊರಟಿರುವೆ..

**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಎಂ. ಶಿವಕುಮಾರ್

**ಟ್ರಸ್ಟಿಗಳು**

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ವಿ.ಆರ್. ನಾಥ್

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

**ಚಂದಾ ವಿವರ:**
**ಬಿಡಿ ಪ್ರತಿ: ರೂ. 10/-**
**ವಾರ್ಷಿಕ ಚಂದಾ: ರೂ. 100/-**
**ಹತ್ತು ವರ್ಷದ ಚಂದಾ:ರೂ. 750/-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳಿಸಿ.
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.



# ಅಪರಂಜಿ

ತಿಳಿನಗೆಯ ಕಾರಂಜಿ

**ಸಂಪುಟ 33**
**ಸಂಚಿಕೆ - 5**
**ಫೆಬ್ರವರಿ - 2016**

## ಈ ಸಂಚಿಕೆಯಲ್ಲಿ .....

| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ನಮ್ಮ ನಿಮ್ಮಲ್ಲಿ | **ಶಿವಕುಮಾರ್** | 3 |
| ಪೋಲೀಯೋ ಹನಿ... | **ಡಿ.ವಿ. ಗುರುಪ್ರಸಾದ್** | 6 |
| ತಲೆಯ ಬೆಲೆ | **ನ. ರತ್ನ** | 10 |
| ಸಾಟರ್ಡೇ ಸಿನಿಮಾ.... | **ಎಚ್. ಗೋಪಾಲಕೃಷ್ಣ** | 13 |
| ಸಾಮರಸ್ಯದ ಗುಟ್ಟು | **ವಿದ್ಯಾ ವಿ. ಹಾಲಭಾವಿ** | 18 |
| ಪಾದಾರವಿಂದ | **ಪ್ರಕಾಶ್** | 19 |
| ತುಂತುರು | **ದಂನಾಳ** | 22 |
| ಮಗುವಿಗೆಂಥಾ ಹೆಸರು | **ಬೇಲೂರು ರಾಮಮೂರ್ತಿ** | 23 |
| ವಿಶ್ವಾಸ | **ಕುಮುದಾ ಪುರುಷೋತ್ತಮ್** | 26 |
| ನಟ ನಟಿ : ತೆರೆದಿಟ್ಟ ಸತ್ಯ | **ಭುವನೇಶ್ವರಿ ಹೆಗಡೆ** | 30 |
| ಬ್ಯಲ್ಲ | **ಸೂರಿ ಹಾರ್ದಳ್ಳಿ** | 35 |
| ಸೀರೆ ಶಾಪಿನಲ್ಲೊಂದು... | **ಎಂ.ಕೆ. ಭಾಸ್ಕರ ರಾವ್** | 38 |

**ಮುಖಪುಟ ವ್ಯಂಗ್ಯಚಿತ್ರ - ಜಿ.ಎಸ್. ನಾಗನಾಥ್**


ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: koravanji42@hotmail.com

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

*ಮುದ್ರಣ : ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● ಪ್ರಕಾಶ್



ಬಿ.ಸಿ.ಸಿ.ಐ.ನಲ್ಲಿ ರಾಜಕಾರಣಿಗಳಿಗೆ ಜಾಗವಿಲ್ಲ – ಲೋಧಾ ಸಮಿತಿ

**● *ಸಮಿತಿ ಗೂಗ್ಲಿ ಹಾಕಿದಂತಿದೆ !!***

★★★

ಕೇಂದ್ರ ತಡೆದರೂ ತನಿಖೆ – ಕೇಜ್ರಿವಾಲ್

**● *ಜಟ್ಟಿ ಬಿದ್ದರೂ ಮೀಸೆ..... !!***

★★★

ಆಧ್ಯಾತ್ಮಿಕ ಶ್ರೀಮಂತಿಕೆಗೆ ಮಠಗಳ ಕೊಡುಗೆ ಅಪಾರ – ಶೀರ್ಷಿಕೆ

**● *ಮಠಗಳಿಗೆ 'ಇತರ'ರ ಕೊಡುಗೆ ಇನ್ನೂ ಅಪಾರ ಅಂತ ಅಪರಂಜಿ ನಕ್ಕಳಂತೆ !!***

★★★

ಜೈಲಿಗೆ ಮರಳಿದ 19 ಖೈದಿಗಳು – ಸುದ್ದಿ

**● *ಊಟ ಸಪ್ಪೆ ಅನಿಸಿರಬೇಕು, ಪಾಪ !!***

★★★

ಸಿ.ಎಂ. ದ್ವೇಷದ ರಾಜಕಾರಣ; ಶ್ರೀ ರಾಮುಲು – ಸುದ್ದಿ

**● *ರಾಮ, ರಾಮ !!***

★★★

ಹೆಲ್ಮೆಟ್ ಕಡ್ಡಾಯ; ಬಿ.ಜೆ.ಪಿ. ಪ್ರತಿಭಟನೆ – ಸುದ್ದಿ

**● *ತಲೆ-ಹರಟೆ ಅಂದರೆ ಇದೇ ಇರಬೇಕು !!***

★★★

ಉತ್ತರ ಕೊರಿಯಾ ಜಲಜನಕ ಬಾಂಬ್ – ಸುದ್ದಿ

**● *ಇದಕ್ಕೆ ಉತ್ತರ ಕೊಡಲೇ ಬೇಕು !!***

★★★

'ನಾನಿರಲಿ, ಬಿಡಲಿ, ಇಂಡಿಯಾ ಇನ್‌ಕ್ರೆಡಿಬಲ್ ಆಗೇ ಇರುತ್ತೆ' – ಆಮಿರ್ ಖಾನ್

**● *ಒಪ್ಪಬೇಕಾದ ಮಾತು ಅಂತ ಅಪರಂಜಿ ನಕ್ಕಳಂತೆ !!***

★★★

# ನಮ್ಮ ನಿಮ್ಮಲ್ಲಿ

**ರಾ.**ಶಿ.ಯವರು ಕಸ್ತೂರಿಯವರೊಂದಿಗೆ ಜೊತೆಗೂಡಿ 1942ರಲ್ಲಿ ಕೊರವಂಜಿಯನ್ನು ಹೊರತಂದಾಗ ಯುವಕ ಆರ್.ಕೆ. ಲಕ್ಷ್ಮಣ್‌ನ ಹೆಸರು ಮುಖಪುಟದಲ್ಲೇ ರಾರಾಜಿಸುತ್ತಿತ್ತು. ಕೈಯಲ್ಲಿ ಬೊಂಬೆಯೊಂದನ್ನು ಇಟ್ಟುಕೊಂಡು ಕಣಿ ಹೇಳಲು ಸಿದ್ಧಳಾಗಿದ್ದ ಕೊರವಂಜಿಯ ಚಿತ್ರವನ್ನು ರಚಿಸಿದ್ದು ಲಕ್ಷ್ಮಣ್. ಇದರೊಂದಿಗೆ ಪ್ರಾರಂಭವಾಗಿ, ಮೊದಲ ಹಲವು ವರ್ಷಗಳಲ್ಲಿ ಪ್ರತಿ ಸಂಚಿಕೆಯಲ್ಲೂ ಆರ್.ಕೆ. ಲಕ್ಷ್ಮಣ್‌ರವರ ವ್ಯಂಗ್ಯಚಿತ್ರಗಳು ಕೊರವಂಜಿ ಓದುಗರನ್ನು ರಂಜಿಸುತ್ತಿದ್ದವು. ಆ ದಿನಗಳಲ್ಲಿ ಲಕ್ಷ್ಮಣ್ ಕಸ್ತೂರಿಯವರ ವಿದ್ಯಾರ್ಥಿ. ಚಿಕ್ಕ ವಯಸ್ಸಿನಿಂದಲೇ ಲಕ್ಷ್ಮಣ್‌ಗೆ ವ್ಯಂಗ್ಯಚಿತ್ರ ರಚನಾ ಕಲೆ ಒಲಿದು ಬಂದಿತ್ತು. ಇಂತಹ ಪ್ರತಿಭಾವಂತ ಕಲೆಗಾರ ಕೊರವಂಜಿಯ ಪ್ರಾರಂಭದ ವರ್ಷಗಳಲ್ಲಿ ಆ ಸಂಚಿಕೆಯೊಂದಿಗೆ ಕೈಜೋಡಿಸಿ ಅತ್ಯಮೂಲ್ಯ ವ್ಯಂಗ್ಯಚಿತ್ರಗಳನ್ನು ರಚಿಸಿದ್ದು ನಿಜಕ್ಕೂ ಒಳ್ಳೆಯ ಸಂಗತಿ.

ಕೊರವಂಜಿಗೆ ಲಕ್ಷ್ಮಣ್ ರಚಿಸಿದ ವ್ಯಂಗ್ಯಚಿತ್ರಗಳ ಮೂಲ ಪ್ರತಿಗಳನ್ನು ರಾ.ಶಿ.ಯವರು ಜೋಪಾನ ಮಾಡಿದ್ದರು. ಅವರ ಕಾಲದ ನಂತರ ಅವೆಲ್ಲಾ ನನಗೆ ಬಳುವಳಿಯಾಗಿ ಬಂದವು. ಈ ಮೂಲಪ್ರತಿಗಳನ್ನು ಮತ್ತು ಅವುಗಳೊಂದಿಗೆ ಲಕ್ಷ್ಮಣ್‌ರ ಇತರ ವ್ಯಂಗ್ಯಚಿತ್ರಗಳ ಪ್ರತಿಗಳನ್ನು ಸೇರಿಸಿ ಕಾರ್ಟೂನಿಸ್ಟ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಅವರು ಕೊರವಂಜಿ ಅಪರಂಜಿ ಟ್ರಸ್ಟ್‌ನ ಸಹಕಾರದಿಂದ ಜನವರಿ ಇಪ್ಪತ್ತಾಮೂರರಂದು ಒಂದು ಪ್ರದರ್ಶನವನ್ನು ಏರ್ಪಡಿಸಿದ್ದರು.



ವ್ಯಂಗ್ಯ ಚಿತ್ರಗಳ ಪ್ರದರ್ಶನದ ಉದ್ಘಾಟನೆಯನ್ನು ನೆರವೇರಿಸಲು ಆರ್.ಕೆ. ಲಕ್ಷ್ಮಣ್‌ರ ಸೊಸೆ ಶ್ರೀಮತಿ ಉಷಾ ಲಕ್ಷ್ಮಣ್ ದೂರದ ಪುಣೆಯಿಂದ ಇದಕ್ಕಾಗಿಯೇ ಬಂದದ್ದು ನಿಜಕ್ಕೂ ಮಹತ್ವದ ಸಂಗತಿ. ಅವರೊಂದಿಗೆ ಅವರ ಬಂಧು-ಮಿತ್ರರೂ ಅಲ್ಲಿ ಸೇರಿದ್ದರು. ಕಾರ್ಟೂನಿಸ್ಟ್ಸ್ ಅಸೋಸಿಯೇಷನಿನ ಅಧ್ಯಕ್ಷರಾದ ನರೇಂದ್ರ ಅವರು ಬೇಲೂರು ಮತ್ತು ನನ್ನನ್ನು ಮುಖ್ಯ ಅತಿಥಿಗಳಾಗಿ ಬಂದು ನಾಲ್ಕು ಮಾತುಗಳನ್ನಾಡಬೇಕೆಂದು ವಿನಂತಿಸಿ ಕೊಂಡಿದ್ದರು. ನಮ್ಮೊಂದಿಗೆ ನಮ್ಮ



**ಶ್ರೀಮತಿ ಉಷಾ ಲಕ್ಷ್ಮಣ್ ಅವರು ದೀಪ ಬೆಳಗುವ ಮೂಲಕ ಕಾರ್ಯಕ್ರಮದ ಉದ್ಘಾಟನೆ ಮಾಡಿದರು**

ಟ್ರಸ್ಟಿನ ಸದಸ್ಯರಾದ ಆನಂದ ಮತ್ತು ಸಿ.ಆರ್. ಸತ್ಯ ಇವರುಗಳೂ ಇದ್ದದ್ದು ಚೆನ್ನಾಗಿತ್ತು.

ಜ್ಯೋತಿಯನ್ನು ಬೆಳಗುವುದರ ಮೂಲಕ ಉಷಾ ಅವರು ಪ್ರದರ್ಶನದ ಉದ್ಘಾಟನೆಯನ್ನು ವಿಧಿವತ್ತಾಗಿ ಮಾಡಿದರು.

ಪ್ರದರ್ಶನದಲ್ಲಿ ವೀಕ್ಷಣೆಗಾಗಿ ಇಟ್ಟಿದ್ದ ವ್ಯಂಗ್ಯಚಿತ್ರಗಳಲ್ಲಿ ಹದಿನಾಲ್ಕು ಚಿತ್ರಗಳ ಮೂಲಪ್ರತಿಗಳೇ ಇದ್ದದ್ದು ಒಂದು ವೈಶಿಷ್ಟ್ಯವೆಂದೇ ಹೇಳಬಹುದು. ಮಿಕ್ಕ ನಲವತ್ತು ವ್ಯಂಗ್ಯಚಿತ್ರಗಳು ನಾನು ಸ್ಕ್ಯಾನ್ ಮಾಡಿ ಮುದ್ರಿಸಿದ್ದವು. ಲಕ್ಷ್ಮಣ್ ಚಿತ್ರಗಳೆಂದರೆ ಕೇಳಬೇಕೆ? ಒಂದೊಂದೂ ಅತಿ ಕುಶಲತೆಯಿಂದ ರಚಿಸಿದ ಕೃತಿಗಳು. ಕಣ್ಣು, ಕಿವಿ, ಮೂಗು ಬಾಯಿಗಳನ್ನು ಕೆಲವೇ ಸ್ಕ್ವಿಗಲ್‌ಗಳಿಂದ ರಚಿಸಿ ಮಾನವ ಸಹಜ ಭಾವನೆಗಳಾದ ಕೋಪ, ನಾಚಿಕೆ, ಆಶ್ಚರ್ಯ, ಸಂತಸ ಇವುಗಳನ್ನು ಲಕ್ಷ್ಮಣ್ ಮೂಡಿಸಿರುವ ರೀತಿ ಬೆರಗುಗೊಳಿಸುವಂತಹದು.

ನರೇಂದ್ರರ ಪ್ರಾಸ್ತಾವಿಕ ಭಾಷಣದ ನಂತರ ನನ್ನ ಸರದಿ. ರಾ.ಶಿ., ನಾ. ಕಸ್ತೂರಿ ಇವರುಗಳು ಲಕ್ಷ್ಮಣ್‌ನನ್ನು ಸಂಪರ್ಕಿಸಿದ ಕ್ಷಣದಿಂದ ಹಿಡಿದು ಆತ ಕೊರವಂಜಿಯ ಒಂದು ಅವಿಭಾಜ್ಯ ಅಂಗವೇ ಆಗಿಹೋದದ್ದನ್ನೆಲ್ಲಾ ನನ್ನ ನೆನಪಿನ ಬುತ್ತಿಯಿಂದ ಹೊರತೆಗೆದು ಹಂಚಿಕೊಂಡೆ. ಬೇಲೂರರು ಲಕ್ಷ್ಮಣ್‌ರವರ ಕೊರವಂಜಿಯೇತರ ಹಾಸ್ಯ ಚಟಾಕಿಗಳನ್ನು ಕೇಳುಗರಿಗೆ ಉಣಬಡಿಸಿದರು. ಶ್ರೀಮತಿ ಉಷಾರವರು ತಮ್ಮ ಮಾವನವರ ಬಗ್ಗೆ ಅತ್ಯಂತ ಆಪ್ತವಾಗಿ ಮಾತನಾಡಿದರು. ''ಲಕ್ಷ್ಮಣ್‌ರವರು ಕರ್ನಾಟಕ ಮತ್ತು ಕನ್ನಡ ಭಾಷೆಯನ್ನು ಬಹುವಾಗಿ ಪ್ರೀತಿಸುತ್ತಿದ್ದರು. ಅವರ ಚಿತ್ರಗಳು ಮನುಷ್ಯನ ಭಾವನೆಗಳಿಗೆ ಬೆಲೆಯನ್ನು ಕೊಡುತ್ತಿದ್ದವು. ಅವರನ್ನು ಯಾರಾದರೂ ನನ್ನನ್ನು ಕುರಿತು,



**ಶ್ರೀಮತಿ ಉಷಾ ಲಕ್ಷ್ಮಣ್ ಅವರೊಂದಿಗೆ ಅಪರಂಜಿ ಸಂಪಾದಕರಾದ ಶಿವಕುಮಾರ್ ಮತ್ತು ಉಪ ಸಂಪಾದಕರಾದ ಬೇಲೂರು ರಾಮಮೂರ್ತಿ**

''ಇವರು ನಿಮ್ಮ ಸೊಸೇನಾ?'' ಎಂದು ಕೇಳಿದರೆ, ಅವರು ತಕ್ಷಣ, ''ಇಲ್ಲ, ಈಕೆ ನನ್ನ ಮಗಳು. ನನ್ನ ಮಗನ ಹೆಂಡತಿ'' ಎಂದುಬಿಡುತ್ತಿದ್ದರು.'' ಎಂದೆಲ್ಲಾ ಶ್ರೀಮತಿ ಉಷಾ ಲಕ್ಷ್ಮಣ್ ಅವರು ನೆನಪಿಸಿಕೊಂಡರು. ಮುಂಬಯಿನ ಜೆ.ಜೆ. ಕಲಾಶಾಲೆಯ ಆವರಣದಲ್ಲಿ ಲಕ್ಷ್ಮಣ್ ಅವರ ನೆನಪಿನಲ್ಲಿ ಒಂದು ಸ್ಮಾರಕವನ್ನು ನಿರ್ಮಿಸಲು ಮಹಾರಾಷ್ಟ್ರ ಸರ್ಕಾರ ಮುಂದಾಗಿದ್ದು ಅವರನ್ನು ಮುಂದಿನ ಪೀಳಿಗೆಗೆ ಜೀವಂತವಾಗಿರಿಸುವ ನಿಟ್ಟಿನಲ್ಲಿ ಇದೊಂದು ಸ್ವಾಗತಾರ್ಹ ಬೆಳವಣಿಗೆ ಎಂದು ಉಷಾ ಅವರು ಸಂತಸಪಟ್ಟರು.

ಸಮಾರಂಭ ಸಮಯಕ್ಕೆ ಸರಿಯಾಗಿ ಶುರುವಾಗಿ ಕರಾರುವಕ್ಕಾಗಿ ಹನ್ನೆರಡೂವರೆಗೆ ಮುಗಿದದ್ದು ನಮ್ಮ ಹಾಸ್ಯೋತ್ಸವಗಳ ಶಿಸ್ತಿನ ದಿನಗಳನ್ನು ನೆನಪಿಗೆ ತಂದಿತು.

**ಶಿವಕುಮಾರ್**

---

## ✳✳ ಅಪರಂಜಿ 34ರ ಹಬ್ಬ ✳✳

ಅಪರಂಜಿಗೆ 33 ತುಂಬಿ 34ಕ್ಕೆ ಕಾಲಿಡಲಿದ್ದಾಳೆ. ಈ ಸಂಭ್ರಮವನ್ನು 05-04-2016ರಂದು ಆಚರಿಸಲು ಒಂದು ಹಬ್ಬವನ್ನು ಬೆಂಗಳೂರಿನ ಭಾರತೀಯ ವಿದ್ಯಾಭವನದಲ್ಲಿ ಆಯೋಜಿಸಿದೆ. ವಿವರಗಳು ಮುಂದಿನ ಸಂಚಿಕೆಗಳಲ್ಲಿ.

ಅಪರಂಜಿಯ ಅಭಿಮಾನಿಗಳಿಗೆಲ್ಲ ಸುಸ್ವಾಗತ

# ಪೋಲೀಯೋ ಹನಿ ಮತ್ತು ನಾನು

**- ಡಿ.ವಿ. ಗುರುಪ್ರಸಾದ್**

''ಸರ್, ತಮಗೊಂದು ಸಿಹಿ ಸುದ್ದಿ, ಇನ್ನು ಒಂದೇ ತಿಂಗಳಲ್ಲಿ ಅಧಿಕೃತ ಕಾರ್ಯಕ್ಕೆಂದು ನಿಮ್ಮನ್ನು ಪಶ್ಚಿಮ ಆಫ್ರಿಕಾಗೆ ಕಳುಹಿಸಲಾಗುತ್ತಿದೆ. ಕಂಗ್ರಾಟ್ಸ್'' ಎಂದ ನನ್ನ ಸಹೋದ್ಯೋಗಿ ರವೀಂದ್ರ.

''ಥ್ಯಾಂಕ್ಸ್ ರವೀ, ಅಂದ ಹಾಗೆ ಯಾರು ಯಾರು ನನ್ನಜತೆ ಬರುತ್ತಾರೆ'' ಎಂದೆ.

ತನ್ನ ಭುಜವನ್ನು ತಾನೇ ತಟ್ಟಿಕೊಂಡ ರವೀ, ''ನಾನೀಗಾಗಲೇ ಅಲ್ಲಿಗೆ ಹೋಗಿ ಬಂದಿರುವುದರಿಂದ ನಾನೂ ನಿಮ್ಮಜತೆ ಬರುತ್ತಿದ್ದೇನೆ'' ಎಂದ. ''ಸರ್ ನೀವು ಯೆಲ್ಲೋ ಫೀವರ್ ಚುಚ್ಚುಮದ್ದು ತೆಗೆದುಕೊಂಡಿದ್ದೀರಾ'' ಎಂದು ಕೇಳಿದ.

ಅವನತ್ತ ಪ್ರಶ್ನಾರ್ಥಕವಾಗಿ ನೋಡಿದೆ.

''ಆಫ್ರಿಕಾದ ದೇಶಗಳಿಗೆ ಹೋದವರಿಗೆ ಹಲವಾರು ಬಗೆಯ ಸೋಂಕು ರೋಗಗಳು ಬರುವ ಸಾಧ್ಯತೆ ಇದೆ. ಹೀಗಾಗಿ ಈ ಚುಚ್ಚುಮದ್ದು ಅತ್ಯಗತ್ಯ'' ಎಂದ.

''ನಾನು ಈಗಾಗಲೇ ದಕ್ಷಿಣ ಆಫ್ರಿಕಾ, ಈಜಿಪ್ಟ್ ದೇಶಗಳಿಗೆ ಹೋಗಿ ಬಂದಿದ್ದೇನೆ. ಆಗ ಚುಚ್ಚುಮದ್ದು ಹಾಕಿಸಿಕೊಳ್ಳಲು ಯಾರು ಹೇಳಲಿಲ್ಲವಲ್ಲಾ'' ಎಂದೆ.

''ಸರ್, ಈಗ ನಾವು ಹೋಗುತ್ತಿರುವುದು ಪಶ್ಚಿಮ ಆಫ್ರಿಕಾಕ್ಕೆ. ಎಬೋಲಾ ಮುಂತಾದ ರೋಗಗಳು ಈ ಭಾಗದಲ್ಲಿ ತೀವ್ರವಾಗಿರುವುದರಿಂದ ಯೆಲ್ಲೋ ಫೀವರ್ ಚುಚ್ಚುಮದ್ದು ಹಾಕಿಸಿಕೊಳ್ಳದಿದ್ದರೆ ನಿಮಗೆ ವೀಸಾನೇ ಕೊಡುವುದಿಲ್ಲ'' ಎಂದ.

''ಹಾಗಾದರೆ ನಾನು ಚುಚ್ಚುಮದ್ದು ತೆಗೆದುಕೊಳ್ಳಲು ನೀನೇ ವ್ಯವಸ್ಥೆ ಮಾಡು'' ಎಂದೆ.

''ಸರ್, ಈ ಚುಚ್ಚುಮದ್ದನ್ನು ಸರ್ಕಾರಿ ಆರೋಗ್ಯ ಅಧಿಕಾರಿಗಳೇ ಹಾಕಬೇಕು. ಬೆಂಗಳೂರಿನಲ್ಲಿ ಒಂದೇ ಒಂದು ಜಾಗದಲ್ಲಿ ಈ ಚುಚ್ಚುಮದ್ದು ಕೊಡುವುದು. ಅದೂ ಬುಧವಾರಗಳು ಮಾತ್ರ. ನಿಮ್ಮನ್ನು ಮುಂದಿನ ವಾರ ಕರೆದೊಯ್ಯುತ್ತೇನೆ, ರೆಡಿಯಾಗಿರಿ'' ಎಂದ.

ಮುಂದಿನ ಬುಧವಾರ ಅವನ ಜೊತೆ ಆರೋಗ್ಯ ಇಲಾಖೆ ಕಛೇರಿಗೆ ಹೋದೆ. ಅನಕೊಂಡ ಹಾವಿನಂತೆ ಉದ್ದನೆಯ ಕ್ಯೂ ಇತ್ತು. ಪ್ರತಿ ಬುಧವಾರ ಇಲ್ಲಿ ಐನೂರು ಜನರಿಗೆ ಚುಚ್ಚುಮದ್ದು ನೀಡಲಾಗುತ್ತದೆ. ಹೀಗಾಗಿಯೇ ಇಷ್ಟು ದೊಡ್ಡ ಕ್ಯೂ ಎಂದ ರವೀ ಹಾಗೂ ಹೀಗೂ ತನ್ನ ಪ್ರಭಾವ ಉಪಯೋಗಿಸಿ ನನ್ನನ್ನು ಒಂದು ಕಛೇರಿಯಲ್ಲಿ ಕೂರಿಸಿ ಅಲ್ಲಿಗೇ ಡಾಕ್ಟರರನ್ನು ಕರೆದುಕೊಂಡು ಬಂದ.

ನನಗೆ ಚುಚ್ಚುಮದ್ದು ಕೊಡಬಂದ ಡಾಕ್ಟರ್, ''ಈ ಚುಚ್ಚುಮದ್ದು ತೆಗೆದುಕೊಂಡ ಕೆಲವು ದಿನಗಳ ನಂತರ ಜ್ವರ, ಮೈ ಕೈ ನೋವು ಬರಬಹುದು. ಹಾಗಾದಾಗ ನನಗೆ

ತಿಳಿಸಬೇಕು'' ಎಂದು ಹೇಳಿ ನಾನು ಆಫ್ರಿಕಾದ ಯಾವ ದೇಶಕ್ಕೆ ಹೋಗುತ್ತಿದ್ದೇನೆ ಎಂದು ಪ್ರಶ್ನಿಸಿದರು.

ನಾನು ''ಘಾನ'' ಎಂದೆ.

ಅವರು ಟೇಬಲ್ ಮೇಲಿದ್ದ ಪಟ್ಟಿಯೊಂದನ್ನು ಹೊರತಗೆದು, ''ಓಹೋ, ಘಾನಾಕ್ಕೆ ಹೋಗುವವರು ಯೆಲ್ಲೋ ಫೀವರ್ ಅಲ್ಲದೆ ಪೊಲೀಯೋ ಲಸಿಕೆಯನ್ನೂ ಹಾಕಿಸಿಕೊಳ್ಳಬೇಕು'' ಎಂದರು.

ನಾನು ಅವಾಕ್ಕಾಗಿ, ''ನನಗೆ ತಿಳಿದಂತೆ ಪೊಲೀಯೋ ಲಸಿಕೆ ಹಾಕುವುದು ಸಣ್ಣ ಮಕ್ಕಳಿಗಲ್ಲವೇ''ಎಂದೆ.

''ಹೌದು ಸರ್, ನಮ್ಮ ದೇಶದಲ್ಲಿ ಪೊಲೀಯೋ ನಿರ್ಮೂಲನೆ ಮಾಡಿದ್ದೇವೆ. ಆದರೆ ಆಫ್ರಿಕಾದಲ್ಲಿ ಪೊಲೀಯೋ ಇನ್ನೂ ಇರುವುದರಿಂದ ನೀವು ಲಸಿಕೆ ಹಾಕಿಸಿಕೊಳ್ಳಲೇಬೇಕು'' ಎಂದರು.

''ಸರಿ'' ಎಂದೆ.

''ನೀವು ಪೊಲೀಯೋ ಲಸಿಕೆಯನ್ನು ನಿಮಗೆ ಪರಿಚಯವಿರುವ ಯಾವುದೇ ಆಸ್ಪತ್ರೆಯಲ್ಲಿ ಹಾಕಿಸಿಕೊಳ್ಳಬಹುದು'' ಎಂದು ಹೇಳಿ ಯೆಲ್ಲೋ ಫೀವರ್ ಚುಚ್ಚುಮದ್ದು ಕೊಟ್ಟೇಬಿಟ್ಟರು.

ಎರಡು ದಿನಗಳ ನಂತರ ರವೀಂದ್ರ ಬಂದು, ''ಸರ್ ನಿಮಗೆ ಪೊಲೀಯೋ ಲಸಿಕೆ ಹಾಕಿಸಲು ವ್ಯವಸ್ಥೆ ಮಾಡಿದ್ದೇನೆ. ಬನ್ನಿ ನನ್ನೊಡನೆ'' ಎಂದು ಒಂದು ದೊಡ್ಡ ಆಸ್ಪತ್ರೆಯ ಮಕ್ಕಳ ಚಿಕಿತ್ಸಾ ವಿಭಾಗಕ್ಕೆ ಕರೆದುಕೊಂಡು ಹೋದ.

ಹೊರರೋಗಿಗಳ ವಿಭಾಗಕ್ಕೆ ಹೋದ ನಾವು ಡಾಕ್ಟರರ ಕೋಣೆಗೆ ನುಗ್ಗಿದೆವು. ಅಲ್ಲಿದ್ದ ಲೇಡಿಡಾಕ್ಟರ್ ''ಏನಾಗಬೇಕು'' ಎಂದರು.

''ಪೊಲೀಯೋ ಲಸಿಕೆ ಹಾಕಿಸಿಕೊಳ್ಳಬೇಕು'' ಎಂದೆ.

''ನಿಮ್ಮ ಮೊಮ್ಮಗು ಎಲ್ಲಿ'' ಎಂದರು.

''ಮನೆಯಲ್ಲಿ ನಿದ್ದೆ ಮಾಡ್ತಾ ಇದ್ದಾನೆ'' ಎಂದೆ.

''ಏನ್ರೀ ಪೇಷಂಟ್ ಕರೆದುಕೊಂಡು ಬರದೆ ನನ್ನ ಸಮಯ ವ್ಯರ್ಥ ಮಾಡಲು ಬಂದಿದ್ದೀರಾ. ಹೊರಡಿ ಆಚೆಗೆ'' ಎಂದು ಗದರಿದರು ಆ ಡಾಕ್ಟರ್.

ಅಷ್ಟರಲ್ಲಿ ರವೀಂದ್ರ, ''ಡಾಕ್ಟರ್, ತಪ್ಪು ತಿಳಿಯಬೇಡಿ, ಪೊಲೀಯೋ ಲಸಿಕೆ ಹಾಕಬೇಕಾಗಿದ್ದು ಇವರಿಗೆ'' ನನ್ನತ್ತ ಬೊಟ್ಟು ಮಾಡಿದ.

ಆಗ ಡಾಕ್ಟರ್, ''ನನ್ನ ಮೂವತ್ತೈದು ವರ್ಷಗಳ ಸರ್ವೀಸಿನಲ್ಲಿ ಮಕ್ಕಳ ಹೊರತಾಗಿ ಬೇರೆ ಯಾರಿಗೂ ಈ ಲಸಿಕೆ ಕೊಟ್ಟಿಲ್ಲ. ಐ ಆಮ್ ಸಾರಿ'' ಅಂದರು.

ಅಷ್ಟರಲ್ಲಿ ರವೀಂದ್ರ ಆಫ್ರಿಕಾ ದೇಶದಿಂದ ಬಂದಿದ್ದ ಪತ್ರವನ್ನು ತೋರಿಸಿ ಇವರಿಗೆ ವೀಸಾ ಸಿಗಬೇಕಾದರೆ ನೀವು ಲಸಿಕೆ ಕೊಡಲೇಬೇಕು ಎಂದ.

ಸರಿ ಎಂದ ಅವರು ನರ್ಸ್‌ಗೆ ಪೊಲೀಯೋ ಲಸಿಕೆ ತರಲು ಹೇಳಿದರು.

ಅಷ್ಟರಲ್ಲಿ ಅವರ ಕೊಠಡಿಗೆ ಒಬ್ಬ ಯುವ ಡಾಕ್ಟರ್ ಬಂದರು.

''ನೋಡ್ರಿ, ಇವರಿಗೆ ಪೊಲೀಯೋ ಲಸಿಕೆ ಕೊಡಬೇಕಂತೆ'' ಎಂದು ನನ್ನತ್ತ ನೋಡಿ ನಕ್ಕರು ಹಿರಿಯ ಡಾಕ್ಟರ್.

''ಮೇಡಂ, ಇತರೇ ದೇಶಗಳಲ್ಲಿ ವಯಸ್ಕರರಿಗೂ ಪೊಲೀಯೋ ಲಸಿಕೆ ಕೊಡುತ್ತಾರೆ. ಆದರೆ ಅದು ಚುಚ್ಚುಮದ್ದಿನ ರೂಪದಲ್ಲಿ ಇರುತ್ತದೆ, ಬಾಯಿಯ ಮೂಲಕ ಹಾಕುವ ಹನಿ ರೂಪದಲ್ಲಲ್ಲ'' ಎಂದರು ಜೂನಿಯರ್.

ಅಷ್ಟರಲ್ಲಿ ಒಳಗೆ ಬಂದಿದ್ದ ನರ್ಸ್, ''ಡಾಕ್ಟರ್ ನಮ್ಮ ಬಳಿ ಚುಚ್ಚುಮದ್ದಿನ ಮೂಲಕ ಕೊಡುವ ಪೊಲೀಯೋ ಲಸಿಕೆ ಇಲ್ಲ'' ಎಂದಳು.

ಅಷ್ಟರಲ್ಲಿ ರವೀ, ''ಮೇಡಂ, ವೀಸಾ ಸಿಗಬೇಕಾದರೆ ಬಾಯಿ ಮೂಲಕ ಹಾಕುವ ಲಸಿಕೆಯನ್ನೇ ನೀಡಬೇಕು. ನೀವು ನಿಮ್ಮ ಬಳಿ ಇರುವ ಲಸಿಕೆಯನ್ನೇ ಇವರಿಗೆ ಹಾಕಿ'' ಎಂದ.

ಅಷ್ಟರಲ್ಲಿ ಜೂನಿಯರ್ ಡಾಕ್ಟರ್, ''ನೋಡಿ ಸರ್, ಬಾಯಿ ಮೂಲಕ ಕೊಡುವ ಪೊಲೀಯೋ ಲಸಿಕೆಯಲ್ಲಿ ಜೀವಂತ ಬ್ಯಾಕ್ಟೀರಿಯಾ ಇರುತ್ತದೆ. ಚುಚ್ಚುಮದ್ದಿನಲ್ಲಿರುವುದು ಸತ್ತ ಬ್ಯಾಕ್ಟೀರಿಯಾ. ನೀವು ಬಾಯಿ ಮೂಲಕ ಲಸಿಕೆ ಪಡೆದರೆ ನಿಮಗೆ ಪೊಲೀಯೋ ಬರುವ ಸಾಧ್ಯತೆ ಇದೆ, ಹುಷಾರ್'' ಎಂದ.

''ಹಾಗಾದರೆ ನನಗೆ ಈ ಲಸಿಕೆ ಬೇಡ'' ಎಂದು ಹೇಳಿ ಆ ಕೋಣೆಯಿಂದ ಬರಬರನೆ ಹೊರನಡೆದೆ. ಹಿಂದಿನಿಂದ ಓಡಿಬಂದ ರವೀಂದ್ರ ನನ್ನನ್ನು ಎಳೆದುಕೊಂಡು ಹೋಗಿ ಡಾಕ್ಟರ್ ಮುಂದೆ ಕೂರಿಸಿ ಬಾಯಿ ತೆಗೆಯಲು ಹೇಳಿದ. ತಟ್ಟನೆ ನರ್ಸ್ ನನ್ನ ಬಾಯೊಳಗೆ ಮೂರು ಹನಿ ಪೊಲೀಯೋ ಲಸಿಕೆ ಹಾಕಿದಳು.

ಬಾಯೆಲ್ಲಾ ಒಂದುರೀತಿಯ ಒಗರು ರುಚಿಯಾಯಿತು. ನೀರು ಕೇಳಿದೆ. ''ಈ ಲಸಿಕೆ ಹಾಕಿದ ಎರಡುಗಂಟೆ ಏನನ್ನೂ ತಿನ್ನಬಾರದು, ಏನ್ನನ್ನೂ ಕುಡಿಯಬಾರದು. ಉಗುಳು ನುಂಗಿ'' ಎಂದಳು ನರ್ಸಮ್ಮ.

''ನಾವು ಮಕ್ಕಳಿಗೆ ಲಸಿಕೆ ಹಾಕುವುದರಿಂದ ಇದರ ರುಚಿ ಹೇಗಿರುತ್ತದೆ ಎಂದು ಗೊತ್ತಿರಲಿಲ್ಲ. ನಿಮ್ಮ ಮೂಲಕ ನಮಗೂ ಈಗ ಗೊತ್ತಾಯಿತು, ಥ್ಯಾಂಕ್ಸ್'' ಎಂದರು ಹಿರಿಯ ಡಾಕ್ಟರ್.

ಗಂಟು ಮುಖ ಹಾಕಿಕೊಂಡೇ ರವೀಂದ್ರನ ಜೊತೆ ಕಛೇರಿಗೆ ವಾಪಸ್ಸಾದೆ.

ಸುಮಾರು ಒಂದು ವಾರದ ನಂತರ ಇದ್ದಕ್ಕಿದ್ದಂತೆ ತಲೆಭಾರ, ಮೈ ಕೈ ನೋವು ಹಾಗೂ ಸಣ್ಣದಾಗಿ ಜ್ವರ ಬಂದಿತು.

ತಡಮಾಡದೆ ವೈದ್ಯರ ಹತ್ತಿರ ಓಡಿಹೋದೆ. ಅವರು ತಪಾಸಣೆ ಮಾಡಿ ಒಂದು ಕೋರ್ಸ್ ಆಂಟಿಬಯಾಟಿಕ್ ಮಾತ್ರೆಗಳನ್ನು ನೀಡಿದರು.

ಒಂದು ವಾರದ ನಂತರವೂ ಜ್ವರ ಬಿಡಲಿಲ್ಲ. ಮೈ ಕೈ ನೋವೂ ಬಿಡಲಿಲ್ಲ. ಕಛೇರಿಗೆ ರಜಾ ಹಾಕಿದ್ದ ನಾನು ಮನೆಯಲ್ಲೇ ಕುಳಿತು ಗೂಗಲ್‌ನಲ್ಲಿ ಪೋಲೀಯೋ ರೋಗದ ಸಂಕೇತಗಳೇನು ಎಂದು ನೋಡಿದೆ.

ಗಂಟಲು ನೋವು, ಮೈ ಕೈ ನೋವು, ತಲೆನೋವು, ಕತ್ತು ನೋವು ಹಾಗೂ ಜ್ವರಬರುವುದು ಪೋಲೀಯೋ ರೋಗದ ಮುಖ್ಯ ಲಕ್ಷಣ ಎಂದು ಬರೆದಿತ್ತು. ಮಕ್ಕಳ ರೋಗ ವಿಭಾಗದ ಜೂನಿಯರ್ ಡಾಕ್ಟರ್ ಹೇಳಿದ ಮಾತುಗಳೇ ಕಿವಿಯಲ್ಲಿ ತಮಟೆಯ ಶಬ್ದದಂತೆ ಮೊಳಗತೊಡಗಿದವು.

ಬಾಯಿ ಮೂಲಕ ಪಡೆಯುವ ಪೋಲೀಯೋ ಲಸಿಕೆಯ ಜೀವಂತ ಕೀಟಾಣುಗಳಿಂದ ನನಗೆ ಈ ರೋಗ ಬಂದೇಬಿಟ್ಟಿದೆ ಎಂದುಕೊಂಡು ಗಾಭರಿಯಾದೆ. ಬೆವರು ಸುರಿಯಿತು. ಮೈ ಕೈ ನಡುಗಿತು.

ಮಾರನೆಯ ದಿನವೇ ತಡಮಾಡದೆ ಮನೆಯ ಹತ್ತಿರವಿದ್ದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಹೋದೆ. ಅಲ್ಲಿ ನನ್ನ ರಕ್ತ ಪರೀಕ್ಷೆ, ಮೂತ್ರ ಪರೀಕ್ಷೆ, ಎಕ್ಸರೇ, ಸಿ.ಟಿ.ಸ್ಕ್ಯಾನ್, ಅಲ್ಟ್ರಾ ಸೌಂಡ್ ಮತ್ತು ಇನ್ನೇನೋ ಪರೀಕ್ಷೆಗಳನ್ನು ಮಾಡಿ ಮಧ್ಯಾಹ್ನ ಬನ್ನಿ ರಿಪೋರ್ಟ್ ಕೊಡುತ್ತೇನೆ ಎಂದಳು. ಹೆದರಿಕೆಯಿಂದಲೇ ಮಧ್ಯಾಹ್ನ ಹೋದೆ. ''ನಿಮಗೆ ಏನು ಆಗಿಲ್ಲ. ಚೆನ್ನಾಗಿದ್ದೀರಾ'' ಎಂದರು. 5000 ರೂಪಾಯಿ ಬಿಲ್ ಕೊಡಬೇಕಾಗಿ ಬಂತು.

ಮಾರನೆಯ ದಿನ ಬೆಳಗಾಗುವಷ್ಟರಲ್ಲಿ ಜ್ವರ ಬಿಟ್ಟಿತ್ತು. ಮೈ ಕೈ ನೋವೂ ಹೋಗಿತ್ತು. ಒಂದು ವಾರದ ರಜೆಯ ನಂತರ ಕಛೇರಿಗೆ ವಾಪಸ್ಸಾದೆ.

ಕಛೇರಿ ಬಾಗಿಲಲ್ಲೇ ಭೇಟಿಯಾದ ರವೀಂದ್ರ. ಅವನ ಮುಖ ಪೆಚ್ಚಾಗಿತ್ತು. ''ನಿನಗೇ ಜ್ವರ ಬಂದಂತಿದೆಯಲ್ಲಾ ಏಕೆ'' ಎಂದೆ.

''ನಮ್ಮ ಆಫ್ರಿಕಾದ ಪ್ರವಾಸವೇ ರದ್ದಾಯಿತು'' ಎಂದ.

ಪೋಲೀಯೋ ಲಸಿಕೆಯ ಒಗರು ರುಚಿ ಮತ್ತೆ ಮರುಕಳಿಸಿ ಮೈ ಬೆವರಲು ಪ್ರಾರಂಭವಾಯಿತು.

✷

---

**ಮಕ್ಕಳಿಗೆ ಹಾಕಿಸುತ್ತಾರೆ ಲಸಿಕೆ**
**ಪೋಲಿಯೋ**
**ಇದೆಯೇ ಯಾವುದಾದರೂ ಲಸಿಕೆ**
**ಅವರು ಮುಂದೆ ಆಗದಿರಲು**
**ಪೋಕರಿಯೋ ಪೋಲಿಯೋ**

# ತಲೆಯ ಬೆಲೆ

**- ನ. ರತ್ನ**

‘‘**ಸು**ಮ್ಮನೆ ತಲೆ ತಿನ್ನಬೇಡ ಹೋಗೊ! ನಾನು ಚಿಕ್ಕವನಾಗಿದ್ದಾಗಿನಿಂದಲೂ ಕೇಳುತ್ತಾ ಬೆಳೆದಿರುವ ಬುದ್ಧಿವಾದ; ನೀವೂ ಕೇಳಿರಬಹುದು. ಹಾಗೆ ನೋಡಿದರೆ, ನಾನು ಯಾವಾಗಲೇ ಆಗಲಿ, ಯಾರದೇ ಆಗಲಿ ತಲೆ ತಿನ್ನುವ ಇರಾದೆ ಬೆಳೆಸಿಕೊಂಡವನಲ್ಲ. ಸುಮ್ಮನೆ ಆಗಲಿ, ದುಡ್ಡಿಗಾಗಲಿ ಅಥವಾ ಇನ್ನಾವುದೇ ಆಮಿಷಕ್ಕೊಳಗಾಗಿಯಾಗಲಿ, ನನಗೆ ಯಾರ ತಲೆಯಾಗಲಿ, ಯಾವುದೇ ಪ್ರಾಣಿಯ ತಲೆಯಾಗಲಿ ತಿನ್ನಬೇಕು ಅನ್ನಿಸಿಲ್ಲ.’’

ನಾನು ವೈದ್ಯಕೀಯ ವಿದ್ಯಾರ್ಥಿಗಳು ಮನುಷ್ಯನ ತಲೆ ಬುರುಡೆ ಹಿಡಿದು ಕಲಿಯುತ್ತಾರೆಂದು ಕೇಳಿದ್ದೇನೆ. ಆ ಬುರುಡೆಗಳು ಈಗ ಸಿಗುವುದೇ ಕಷ್ಟವಂತೆ. ಯಾವುದೋ ಆಕಸ್ಮಿಕವಾಗಿ ಸತ್ತವರ, ಅನಾಥರ ಹೆಣಗಳನ್ನೂ ಹುಡುಕಬೇಕು. ಕೆಲವೇ ಕೆಲವರು ಆ ವಿದ್ಯಾರ್ಥಿಗಳಿಗಾಗಿಯೇ ತಮ್ಮ ಬುರುಡೆಯನ್ನು ಒಳಗೊಂಡು ದೇಹವನ್ನೇ ದಾನ ಮಾಡುವ ಪುಣ್ಯಾತ್ಮರೂ ಇದ್ದಾರಂತೆ. ಆದರೆ ನಮ್ಮ ದೇಶದಲ್ಲಿ ಅನೇಕ ಕಡೆ ಗೋರಿಗಳ ದರೋಡೆ ಮಾಡಿ ಬುರುಡೆಗಳನ್ನು ಹರಾಜು ಮಾಡುತ್ತಾರಂತೆ. ಅವುಗಳ ಬೆಲೆ ಈಗ ಕೈಗೆ ಎಟುಕದ್ದು! ಅಂತರ್ಜಾಲದಲ್ಲಿ ಹುಡುಕಿದರೆ ಒಂದೊಂದು ಖಾಲಿ ಮಾನವನ ತಲೆ ಬುರುಡೆಯ ಬೆಲೆ ಸಾವಿರ ಡಾಲರನ್ನೂ ಮೀರಿಯೇ ಇರುತ್ತದೆ! ಅಂದರೆ ಈಗಿನ ಬೆಲೆಯಲ್ಲಿ ಸುಮಾರು ಎಪ್ಪತ್ತು ಸಾವಿರ ರೂಪಾಯಿಗೂ ಹೆಚ್ಚು! ಹೀಗಾಗಿ ಈಗ ಕೃತಕ ಪ್ಲಾಸ್ಟಿಕ್ ಮಾದರಿಯ ಬುರುಡೆಗಳ ಮೊರೆ ಹೋಗಬೇಕು ನಮ್ಮ ಭಾವೀ ವೈದ್ಯರು. ಅವೂ ಅಷ್ಟು ಕಡಿಮೆ ಬೆಲೆಯೇನಲ್ಲ! ನಿಜ ಬುರುಡೆಗಿಂತ ಅರ್ಧದಷ್ಟು ಕಡಿಮೆ ಅಷ್ಟೇ!

ಇಷ್ಟೆಲ್ಲ ತಲೆ ಬುರುಡೆಯ ಮಾತೇಕೆ ಎಂದು ನೀವು ಕೇಳಬಹುದು. ಅದಕ್ಕೆ ಪ್ರೇರಣೆ ನಮ್ಮಲ್ಲಿ ಹಲವರು ತಮ್ಮ ತಲೆಯ ಬೆಲೆಗೆ ಯಾವ ಕಿಮ್ಮತ್ತೂ ಕೊಡುವುದಿಲ್ಲವಲ್ಲಾ ಎನ್ನುವ ವಿಷಾದ. ಮೆದುಳೇ ಇಲ್ಲದೆ ಸತ್ತವರ ತಲೆಬುರುಡೆಯ ಬೆಲೆಯೇ ಎಪ್ಪತ್ತು ಸಾವಿರ ರೂಪಾಯಿಗೂ ಹೆಚ್ಚು! ಆದರೆ ಸುರಕ್ಷಿತ, ಜೀವಂತ (ಮೆದುಳಿದ್ದೂ ಇಲ್ಲದಂತೆ ಇರುವ ಅನ್ನಿ), ಇರುವ ತಲೆಬುರುಡೆಯನ್ನೇಕೆ ಹಲವರು ನಿರ್ಲಕ್ಷಿಸುತ್ತಾರೆ ಎಂದು ಖೇದಭರಿತ ಆಶ್ಚರ್ಯವಾಗುತ್ತದೆ.

ನಾನು ಅನೇಕ ದ್ವಿಚಕ್ರ ವಾಹನ ಸವಾರರಿಗೆ ಅವರು ಶಿರಸ್ತ್ರಾಣವಿಲ್ಲದೆ, ಅಂದರೆ ಹೆಲ್ಮೆಟ್ಟು ಇಲ್ಲದೆ ಗಾಡಿ ಓಡಿಸುವುದು ಕಂಡಾಗ, ಅವರಿಗೆ ಕೂಗಿ ಹೆಲ್ಮೆಟ್ ಧರಿಸುವುದು ಒಳ್ಳೆಯದು ಎಂದು ಎಚ್ಚರಿಸುತ್ತೇನೆ. ಅವರು ನನ್ನ ಕಡೆಗೆ ತಿರುಗಿ ನೋಡಿ, ನಾನು ಯಾರೋ ತಲೆ ಇಲ್ಲದ ಗಮಾರ ಅನ್ನುವಂತೆ ಗಹಗಹಿಸಿ ನಗುತ್ತಾ, ಹಾರ್ನ್ ಹೊಡೆದು ಕೈಬೀಸಿ ಮತ್ತಷ್ಟು ರಭಸವಾಗಿ ಓಡಿಸುತ್ತಾರೆ, ಅವರು ಮಾಡುವುದೆಲ್ಲ ಅಪಾಯವೇ! ಅಲ್ಲ, ಅವರಿಗೇನಾಗಿದೆ? ಅವರು ತಲೆಗಿಲೆ ಯಾಕೆ ಓಡಿಸುವುದಿಲ್ಲ? ಮೊನ್ನೆ, ಒಬ್ಬ

ಹದಿವಯಸ್ಸಿನ ಹುಡುಗನಿಗೆ ಅವನು ಹೊಸದಾಗಿ ಕೊಂಡ ದ್ವಿಚಕ್ರವಾಹನ ಓಡಿಸುವಾಗ ಹೆಲ್ಮೆಟ್ ಧರಿಸಬೇಕೆಂದು ಹೇಳಿದೆ. ಅವನು ಇತರರಂತೆ ಗರ್ವ ತೋರಿಸದೆ, ವಿನಮ್ರವಾಗಿ, ಸಾರ್, ಇದು ಕಡಿಮೆ ಶಕ್ತಿಯ ವಾಹನ. ಎಲೆಕ್ಟ್ರಿಕ್ ವಾಹನ ಇದನ್ನು ಓಡಿಸುವುದಕ್ಕೆ ಲೈಸೆನ್ಸೂ ಬೇಡ, ಹೆಲ್ಮೆಟ್ಟೂ ಬೇಡ, ಪೋಲೀಸರೂ ತಡೆಯುವುದಿಲ್ಲ ಅಂದ! ನಾನು ಅವನಿಗೆ ಹೇಳಿದೆ ''ಹೆಲ್ಮೆಟ್ಟು ಸ್ಕೂಟರಿಗೆ ಬೇಕಿಲ್ಲ! ನಿನ್ನ ತಲೆ ಪೋಲೀಸನ ಜವಾಬ್ದಾರಿಯಲ್ಲ! ನೀನು ಕಡಿಮೆ ವೇಗದಲ್ಲಿಯೇ ಹೋದರೂ ಆಕಸ್ಮಿಕವಾಗಿ ಬೀಳಬಹುದು. ಅದಕ್ಕೆ ಆಕಸ್ಮಿಕ ಅನ್ನುವುದು! ಆಗ ಬೀದಿ ಬದಿಯ ಬಂಡೆ ನಿನ್ನ ಲೈಸೆನ್ಸ್ ಕೇಳುವುದಿಲ್ಲ ಅಥವಾ ನೀನೆಷ್ಟು ಕಡಿಮೆ ವೇಗದಲ್ಲಿ ಚಲಿಸುತ್ತಿದ್ದೆ ಎಂದೂ ಲೆಕ್ಕಿಸುವುದಿಲ್ಲ! ಅದು ತನ್ನ ಗುಣಾನುಗುಣವಾಗಿ, ನಿರ್ದಾಕ್ಷಿಣ್ಯವಾಗಿ ನಿನ್ನ ತಲೆಯನ್ನು ಸೀಳಿಬಿಡುತ್ತದೆ. ಆಗ ಆ ಸ್ಕೂಟರ್ ಕಂಪೆನಿಯವರಾಗಲಿ, ಪೋಲೀಸರಾಗಲಿ ಅಯ್ಯೋ ಪಾಪ ಅಂದಾರೆಯೇ ಹೊರತು, ಅದಕ್ಕಿಂತ ಹೆಚ್ಚು ಸಹಾಯ ಮಾಡುವುದಿಲ್ಲ. ''ಕಷ್ಟಪಡಬೇಕಾದವರು ನೀನು, ನಿನ್ನ ಶುಶ್ರೂಷೆ ಮಾಡುವ ಅಪ್ಪ ಅಮ್ಮಂದಿರು, ನಿನ್ನ ಒಡಹುಟ್ಟಿದವರು, ನಿನ್ನನ್ನು ಜೀವಂತ ಉಳಿಸಲು ಹೆಣಗುವ ವೈದ್ಯರು ಮತ್ತು ಅವರ ಸಿಬ್ಬಂದಿ! ನಿನ್ನ ಶುಶ್ರೂಷೆಯ ಖರ್ಚಿಗೆ ಹಣ ಒದಗಿಸುವುದು, ನಿನ್ನನ್ನು ನೋಡಿಕೊಳ್ಳಲು ಸಮಯ ವ್ಯಯ ಮಾಡುವುದು ಎಷ್ಟು ಪ್ರಯಾಸಕರ ಎಂದು ಲೆಕ್ಕ ಹಾಕು, ಇದನ್ನೆಲ್ಲಾ ತಪ್ಪಿಸುವ ಹೆಲ್ಮೆಟ್ಟಿನ ಬೆಲೆ ತೀರ ಕಡಿಮೆ ಅನಿಸುತ್ತದೆ. ಅದನ್ನು ನೀನು ಸದಾ ಉಪಯೋಗಿಸುವಷ್ಟು ಜಾಣತನ ನಿನ್ನ ತಲೆಯಲ್ಲಿದ್ದರೆ ನಿನಗೆ ಸಿಗುವ ಲಾಭ ಸಾವಿರಪಟ್ಟು ಜಾಸ್ತಿ!''

ಹೀಗೆಲ್ಲ ಹೇಳಿ ನನ್ನ ಮುದಿ ವಯಸ್ಸಿಗನುಗುಣವಾಗಿ ದೀರ್ಘಕಾಲ ಉಪದೇಶ ಮಾಡಿದೆ. ಅವನಿಗೆ ಬೋರಾಗಿರಬೇಕು, ಆದರೆ ಹುಡುಗ ಒಳ್ಳೆಯವನು, ಜಾಣ, ಮರುದಿನವೇ ಹೆಲ್ಮೆಟ್ಟು ಕೊಂಡು ಉಪಯೋಗಿಸಲೂ ಪ್ರಾರಂಭಿಸಿದ. ಒಂದು ತಲೆ ಉಳಿಸಿದ ಸಂತೋಷ, ಹೆಮ್ಮೆ ನನಗೆ. ಆದರೆ ನನಗೆ ಆಶ್ಚರ್ಯವೆಂದರೆ ಅವನಿಗಿಂತ ಹಿರಿಯರನೇಕರು ಹೆಲ್ಮೆಟ್ಟು ಧರಿಸದೇ ತಮ್ಮ ಮನೆಯವರ ಬಗ್ಗೆ ಯಾವ ಕಾಳಜಿಯನ್ನೂ ತೋರಿಸುವುದಿಲ್ಲ ಅನ್ನುವುದು. ಎಷ್ಟೋ ಸಲ ಶಿರಸ್ತ್ರಾಣರಹಿತ ಸವಾರರಿಗೆ ನಾನು ಸಂಕೋಚವಿಲ್ಲದೆ ಎಚ್ಚರಿಸುತ್ತೇನೆ ಆದರೆ ಏನೂ ಲಾಭವಿಲ್ಲ. ಅವರು ನನ್ನನ್ನು ಹುಚ್ಚು ಮುದುಕನೆಂದು ಹೀಯಾಳಿಸುತ್ತಾ ಹೋಗುತ್ತಾರೆ. ಅವರ ಆರ್ಥಿಕ ಪರಿಸ್ಥಿತಿಯಲ್ಲಿ ಅವರು ಹೆಲ್ಮೆಟ್ ಬೆಲೆ ತೆರಲಾರದವರು ಅನ್ನಿಸುವುದಿಲ್ಲ. ಅವರಿಗೆ ತಮ್ಮ ತಲೆಯ ಬೆಲೆ ತಿಳಿಯದೇನೋ?! ಅನೇಕರು ತಮ್ಮ ಬೆತ್ತಲೆ ತಲೆಗೆ ಕೊಡುವ ಕಾರಣ, ಹೆಲ್ಮೆಟ್ಟು ಧರಿಸಿದರೆ ತಲೆ ಕೂದಲು ಉದುರಿ ತಾವು ಬೋಳಾಗಬಹುದು ಎನ್ನುವುದು. ಆ ನಂಬಿಕೆಗೆ ಸಾಕಷ್ಟು ಆಧಾರಗಳಿಲ್ಲ. ಒಂದು ಒಳ್ಳೆಯ ಹೆಲ್ಮೆಟ್ಟಿನೊಳಗೆ ತಲೆಗೆ ಒಂದು ಕರ್ಚೀಫ್ ಇಟ್ಟು ಉಪಯೋಗಿಸಿದರೆ ಮನಸ್ಸಿಗೆ ನೆಮ್ಮದಿಯಾದರೂ ಇದ್ದೀತು, ಅಲ್ಲದೆ ಬೋಳುತನಕ್ಕೆ

ಅನೇಕ ಕಾರಣಗಳಿರಬಹುದು. ದ್ವಿಚಕ್ರ ಗಾಡಿ ಓಡಿಸದ, ಅಂದರೆ ಹೆಲ್ಮೆಟ್ಟೇ ಹಾಕದ, ಎಷ್ಟೋ ಮಂದಿ ಬೋಳರಿಲ್ಲವೇ?

ಹಾಗೆ ಹೆಲ್ಮೆಟ್ಟಿನಿಂದ ತಲೆಗೂದಲು ಹೋದರೆ ತಾನೇ ಏನು? ಹೋದರೆ ಹೋಗಲಿ ಕತ್ತೆ ಬಾಲ! ಅದಕ್ಕಿಂತ ನಮ್ಮ ಪ್ರಾಣ ಹೋಗಬಾರದಲ್ಲವೇ! ಒಂದು ರೀತಿಯಲ್ಲಿ ನೋಡಿದರೆ ಒಂದು ವೇಳೆ ಪ್ರಾಣ ಹೋದರೂ ಪರವಾಗಿಲ್ಲ! ಸತ್ತವರ ಮನೆಯವರಿಗೆ ಅಷ್ಟು ಕಷ್ಟವಿಲ್ಲ. ಒಂದು ಹತ್ತು ದಿನ ಅತ್ತು, ನಂತರ ಸತ್ತವನ ಆತ್ಮ ವೈಕುಂಠವನ್ನೋ, ಕೈಲಾಸವನ್ನೋ ಸೇರಿತೆಂದು ಸಂಭ್ರಮಿಸಿ, ಸಮಾರಾಧನೆ ಮಾಡಿ, ಪುಷ್ಕಲ ಭೋಜನ ಮಾಡಿ, ನಂತರ ವರ್ಷಕ್ಕೊಮ್ಮೆ ತಿಥಿಯ ಊಟಕ್ಕೆ ಕಾಯುತ್ತಾರೆ. ಆಗ ಈಗ ಸತ್ತವರ ಫೋಟೋಗೆ ಹಾರ ಹಾಕಿ, ಒಂದೆರಡು ಹನಿ ಕಣ್ಣೀರು ಹಾಕಿ ನಮಸ್ಕರಿಸಬಹುದು! ಆದರೆ ಸಾಯದೇ ತಲೆ ಗಾಯವಾಗಿ, ಮೆದುಳಿಗೆ ಪೆಟ್ಟು ಬಿದ್ದು, ವೈದ್ಯರ ದಕ್ಷತೆಯಿಂದ ಬದುಕಿ ಉಳಿದು ಬಿಟ್ಟರೆ, ಅನೇಕ ವರ್ಷ ವಿಕಲಾಂಗನಾಗಿ, ಪಾರ್ಶ್ವವಾಯು ಬಡಿದು ಜೀವನವಿಡೀ ದುರ್ಬಲರಾಗಿ ಪರಾವಲಂಬಿಯಾಗಿ ಮನೆಯವರಿಗೆಲ್ಲ ಹೊರೆ ಆಗುವುದಕ್ಕಿಂತ ಸಾಯುವುದೇ ಮೇಲು ಎಂತಲೂ ಅನ್ನಿಸಬಹುದು. ಆದರೆ ಸೋಜಿಗ, ಅದೆಷ್ಟೋ ಜನ ಅದರ ಬಗ್ಗೆ ಯೋಚನೆಯೇ ಮಾಡದಷ್ಟು ಮೆದುಳಿಲ್ಲದ ಕುರಿಗಳಂತಾಗುತ್ತಾರಲ್ಲಾ!

ಇನ್ನೂ ವಿಚಿತ್ರವೆಂದರೆ, ಬೆಲೆಬಾಳುವ ಹೆಲ್ಮೆಟ್ಟು ಖರೀದಿಸಿ ಅಥವಾ ಬೈಕ್ ಮಾರಾಟಗಾರರ ಕೃಪೆಯಿಂದ ಪುಕ್ಕಟೆ ಪಡೆದು ಅದನ್ನು ಬೈಕ್‌ನ ಹೆಡ್‌ಲೈಟಿಗೋ ತಮ್ಮ ಮೊಳಕೈ ತೋಳಿಗೋ ಕೈಗೋ ಸಿಕ್ಕಿಸಿಕೊಂಡು ಮೊಬೈಲಿನಲ್ಲಿ ಮಾತನಾಡುತ್ತಾ ತಮ್ಮ ತಲೆಯನ್ನು ಅಪಾಯಕ್ಕೆ ಈಡು ಮಾಡುವ ಪೆದ್ದರಿದ್ದಾರಲ್ಲಾ! ನೋಡಿದ್ದೀರಾ? ಅಲ್ಲಾ ಆಕಸ್ಮಿಕವಾಗಿ ಬಿದ್ದರೆ ಮೊಳಕೈಗೆ ಏಟು ಬೀಳುತ್ತದೆ ಎನ್ನುವ ಹೆದರಿಕೆಯೇ? ಅವರ ಬುದ್ಧಿ ಮೊಳಕೈ ಕೆಳಗೆ ಇದೆಯೇ? ಅವರ ಮೆದುಳಿನ, ತಲೆಯ ಬೆಲೆ ಅಷ್ಟೇಯೇ? ಕೊನೆಯಲ್ಲಿ, ಅವರವರ ತಲೆಯ ಬೆಲೆ ಅವರಿಗೇ ಗೊತ್ತಿರುವುದಲ್ಲವೇ! ಮೆದುಳಿಲ್ಲದವರಿಗಿಂತ ಮೆದುಳೋಡಿಸದ ಇವರು ಕೀಳಲ್ಲವೇ?!

✷

**ಇಂಗ್ಲಿಷ್ ಚಿತ್ರಗಳು ಕನ್ನಡಕ್ಕೆ ಡಬ್ ಆದರೆ..**

ಹಾಲೊ ಮ್ಯಾನ್ – ತೂತ್ ಮನುಷ್ಯ
ಡೈ ಅನದರ್ ಡೆ – ಇನ್ನೊಂದ ದಿನ ನೆಗೆದು ಬೀಳು
ಗಾನ್ ವಿತ್ ದಿ ವಿಂಡ್ – ಗಾಳ್ಯಾಗೆ ಗವ್ ಅಂತ ಹೋತು
ಸೂಪರ್ ಮ್ಯಾನ್ – ಅಗದೀ ಮಸ್ತ್ ಮನುಷ್ಯ
ಸ್ಕಾರ್ಪಿಯನ್ ಕಿಂಗ್ – ಚೇಳಿನ ರಾಜ
ದಿ ಮಮ್ಮಿ! – ಅವ್ವಾ!!!
ದಿ ಮಮ್ಮಿ ರಿಟರ್ನ್ಸ್ – ಅವ್ವಾ ವಾಪಸ್ ಬಂದ್ಲು
ಮಿಷನ್ ಇಂಪಾಸಿಬಲ್ – ಆಗಂಗಿಲ್ಲ
ದಿ ಮಿಷನ್ ಇಂಪಾಸಿಬಲ್ 2 – ಹೊಯ್ಕೊಂಡ್ರು ಆಗಂಗಿಲ್ಲ

# ಸಾಟರ್ಡೇ ಸಿನಿಮಾ.......

**- ಎಚ್. ಗೋಪಾಲಕೃಷ್ಣ**

**ಸಿ**ನಿಮಾ ಅಂದಕೂಡಲೇ ನನ್ನ ಮನಸ್ಸು ಓಡುವುದು ನನ್ನ ಕಾಲೇಜಿನ ದಿವಸಗಳಿಗೆ – ಐವತ್ತು ವರ್ಷ ಹಿಂದಕ್ಕೆ. ನಾನು ಡಿಗ್ರೀ ಮಾಡಿದ ಬೆಂಗಳೂರಿನ ಕಾಲೇಜಿನ ಸುತ್ತಲೂ ಸಿನಿಮಾ ಥಿಯೇಟರುಗಳು. ಆ ಕಾಲದಲ್ಲಿ ಪ್ರತಿ ದಿವಸವೂ ಮಾರ್ನಿಂಗ್ ಶೋಗಳು – ಅದೂ ಇಳಿಸಿದ ದರದಲ್ಲಿ. ನಮ್ಮ ಕೈಗೆ ಎಟಕುವ ಹಾಗೆ ಆ ದರಗಳು ಇದ್ದವು. ಕಾಲೇಜಿನಿಂದ ಐದು ನಿಮಿಷ ಹೆಜ್ಜೆ ಹಾಕಿದರೆ ಸಾಕು ಕೆಂಪೇಗೌಡರಸ್ತೆ ಎಣಿಸಿದ ಹಾಗೆ ಒಂದೂವರೆ ಡಜನ್ ಸಿನಿಮಾ ಥಿಯೇಟರುಗಳು ನಮ್ಮನ್ನ ಕೈಬೀಸಿ ಕರೆಯುತ್ತಿದ್ದವು. ಹೇಳೀ ಕೇಳೀ ಸರ್ಕಾರೀಕಾಲೇಜು ನಾವು ಓದಿದ್ದು, ಯಾವುದೇ ಕಟ್ಟು ಪಾಡು ಇಲ್ಲದೇ ಗೂಳಿ ಹಾಗೆ ನಮ್ಮನ್ನ ಬಿಟ್ಟು ಬಿಡುತ್ತಿದ್ದರು – ಇವರ ಕಾಟ ತಪ್ಪಿದರೆ ಸಾಕು ಅನ್ನುವ ಮನೋಭಾವ. ಅದರ ಜತೆಗೆ ನಮ್ಮ ಜತೆ ಕಾಲೇಜಿಗೆ ಬರುತ್ತಿದ್ದ ಸುಮಾರು ಸಹಪಾಠಿಗಳು ಪಿಯೂಸಿಯಲ್ಲಿ ದಂಡಯಾತ್ರೆ ಮಾಡಿ ಮಾಡಿ ಮಧ್ಯ ವಯಸ್ಸು ಮುಟ್ಟಿರುತ್ತಿದ್ದ ಯುವಕರು! ಅವರುಗಳೇ ನಮಗೆ ಮಾರ್ಗದರ್ಶಕರು! ಹೀಗಾಗಿ ಪಾಠಪ್ರವಚನಕ್ಕಿಂತಲೂ ಹೆಚ್ಚಾಗಿ ನಮ್ಮ ಸಮಯ ಹೋಗಿದ್ದು ಮೈದಾನದಲ್ಲಿ ಮತ್ತು ಸಿನಿಮಾ ಹಾಲಿನಲ್ಲಿ.

ಕೆಂಪೇಗೌಡರಸ್ತೆಯಲ್ಲಿನ ಪ್ರಭಾತ್ ಸಿನಿಮಾ ಮಂದಿರದಲ್ಲಿ ಹಳೆಯ ಹಿಂದೀ ಸಿನಿಮಾಗಳು ಪ್ರದರ್ಶಿತವಾದರೆ ಅದಕ್ಕೆ ಒಂದೂವರೆ ನಿಮಿಷದಷ್ಟು ದೂರವಿದ್ದ ಹಿಮಾಲಯದಲ್ಲಿ ಪುರಾತನ ಇಂಗ್ಲಿಷ್ ಮತ್ತು ದಾರಾಸಿಂಗ್ ಹಾಗೂ ಹೆಲೆನ್ ನಟಿಸಿದ್ದ ಹಳೆಯ ಹಿಂದಿ ಸಿನಿಮಾಗಳು ನಡೆಯುತ್ತಿತ್ತು. ಚಿತ್ರದ ಪ್ರಮುಖ ಆಕರ್ಷಣೆ ಎಂದರೆ ಹಿಮಾಲಯ ಟಾಕೀಸಿನ ಮುಂದೆ ಹಾಕಿರುತ್ತಿದ್ದ ಪೋಸ್ಟರುಗಳು. ಅತಿಕಡಿಮೆ ದಿರಿಸಿನೊಂದಿಗೆ ಹೆಲೆನ್ ಎಂಬುವ ಪಾರದರ್ಶಕ ಬಟ್ಟೆತೊಟ್ಟ ತಾರೆ ದಾರಾಸಿಂಗ್ ಅನ್ನುವ ಪೈಲ್ವಾನ್ ನಟನ ಜೊತೆಗೆ ಪೋಸ್ಟರಿನಲ್ಲಿ ಎದ್ದು ಕಾಣುತ್ತಿದ್ದಳು. ಪೋಸ್ಟರುಗಳನ್ನು ನೋಡಿ ಸಿನಿಮಾ ನೋಡುವ ಜನ ಆಗಲೂ ಈಗಲೂ ಸರ್ವೆ ಸಾಮಾನ್ಯ. ಚಿಕ್ಕಪೇಟೆಯಲ್ಲಿ ವಿಜಯಲಕ್ಷ್ಮೀ ಎಂಬುವ ಸಿನಿಮಾ ಹಾಲಿನಲ್ಲಿ ಹಳೆಯ ಇಂಗ್ಲಿಷ್ ಸಿನಿಮಾಗಳು ಓಡುತ್ತಿತ್ತು. ವಿದ್ಯಾರ್ಥಿಗಳಿಗೆ ಎಂದೇ ಇಲ್ಲಿ ರಿಯಾಯಿತಿ ದರದಲ್ಲಿ ಪಾಸುಗಳನ್ನು ಕೊಡುತ್ತಿದ್ದರು. ಸರ್ಕಾರೀ ಕಾಲೇಜಿನ ಶೇಕಡಾ ತೊಂಬತ್ತರಷ್ಟು ವಿದ್ಯಾರ್ಥಿಗಳು ಈ ಪಾಸನ್ನು ಹೊಂದಿರುತ್ತಿದ್ದೆವು ಮತ್ತು ಅಲ್ಲಿನ ಪ್ರತಿ ಸಿನಿಮಾವನ್ನೂ ನೋಡುತ್ತಿದ್ದೆವು!

ಹೀಗೆ ನೋಡಿದ ಸಿನಿಮಾಗಳಲ್ಲಿ ಕೆಲವು ಈಗಲೂ ನನ್ನ ಮನಸ್ಸಿನಲ್ಲಿ ನಿಂತಿವೆ. ಪ್ರಭಾತ್ ಸಿನಿಮಾ ಮಂದಿರದಲ್ಲಿ ಗುಂಜೂಟಿ ಶೆಹನಾಯ್ ನೋಡಿದ ನೆನಪು ಈಗಲೂ ಇರುವುದು. ಸಿನಿಮಾ ಪೂರ್ತಿ ಬಿಸ್ಮಿಲ್ಲಾ ಖಾನರ ಶೆಹನಾಯ್ ವಾದನ ಹಿನ್ನೆಲೆಯಲ್ಲಿ ಕೇಳಿಸುತ್ತಲೇ ಇದ್ದುದರಿಂದ ಕನ್ನಡದ ಸನಾದಿ ಅಪ್ಪಣ್ಣ ನೋಡಿದಾಗ ಗುಂಜೂಟಿ ಶೆಹನಾಯ್ ಕಿವಿಯಲ್ಲಿ ಮೊಳಗಿತ್ತು. ಬಂದಿನಿ ಎನ್ನುವ ಸಿನಿಮಾ ಸಹ ಇದೇ ಸಿನಿಮಾ ಮಂದಿರದಲ್ಲಿ ನೋಡಿದ್ದು.

ಅದರಲ್ಲಿನ ಹಿರಿಯ ಬರ್ಮನ್ ಹಾಡು ಸುಮಾರು ವರ್ಷ ನಮ್ಮ ಬಾತ್‌ರೂಮಿನ ಹಾಡಾಗಿತ್ತು. ಕಿಶೋರ್ ಕುಮಾರನ ದೂರ್ ಗಗನ್ ಕಿ ಚಾವೋಂಮೆ, ಚಲ್ತೀಕಾನಾಂ ಗಾಡಿ, ದೋದೂನಿ ಛಾರ್.. ಮತ್ತೂ ಹಲವಾರು ಸಿನಿಮಾಗಳು – ಇವೆಲ್ಲವೂ ಈಗಲೂ ಹಸಿರು ಹಸಿರು. ಪಾಂಚೇ ರೂಪಯ್ಯಾ ಭಾರಾ ಆಣಾ ಮಾರೇಗಾ ಭಯ್ಯಾ ತಾನಾನಾ.. ಎನ್ನುವ ಚಲ್ತೀಕಾನಾಂ ಗಾಡಿಯ ಹಾಡು ಈಗಲೂ ಕೆಲವೊಮ್ಮೆ ನೆನಪಾಗುತ್ತದೆ.

ವಿಜಯಲಕ್ಷ್ಮೀಯಲ್ಲಿ ಆ ಕಾಲದ ಗ್ರೇಟ್ ಎಂದು ಹೆಸರಾಗಿದ್ದ ಬೆನ್ ಹರ್, ಟೆನ್ ಕಮಾಂಡ್ ಮೆಂಟ್ಸ್, ಡಾ. ಜಿವಾಗೋ, ತ್ರೀ ಮಸ್ಕೆಟೀರ್ಸ್ ಮೊದಲಾದ ಕ್ಲಾಸಿಕ್‌ಗಳು ನೋಡಿ ಆನಂದ ಪಟ್ಟಿದ್ದು ಇದೆ. ಇವೆಲ್ಲದರ ಜತೆಗೆ ಆಗ ನಮ್ಮನ್ನುಅತಿ ಹೆಚ್ಚು ಆಕರ್ಷಣೆ ಮಾಡುತ್ತಾ ಇದ್ದ ಇಂಗ್ಲಿಷ್ ಚಿತ್ರಗಳೆಂದರೆ ಚಾರ್ಲಿಚಾಪ್ಲಿನ್ ನಟನೆಯವು. ಚಾಪ್ಲಿನ್ ಸಿನಿಮಾಗಳನ್ನು ಆಗ ಇನ್ನೂ ಈಗಿನ ಹಾಗೆ ತೀವ್ರವಾಗಿ ವಿಮರ್ಶೆಗೆ ಒಳಪಡಿಸಿರಲಿಲ್ಲ ಮತ್ತು ಸಿನಿಮಾದ ಎಬಿಸಿಡಿ ಗೊತ್ತಿಲ್ಲದ ನಾವು ಅದರ ಅಂತರಾಳಕ್ಕೆ ಇಳಿದು ಸಿನಿಮಾವನ್ನು ಹಿಂಜಿ ಹಿಂಜಿ ವಿಮರ್ಶಿಸುವ ಹಂತಕ್ಕೆ ಏರಿರಲಿಲ್ಲ. ಅದರಿಂದ ಆಗ ಚಾಪ್ಲಿನ್ ಸಿನಿಮಾ ಜತೆಜತೆಗೆ ಲಾರೆಲ್ ಹಾರ್ಡಿಯ ಸಿನಿಮಾಗಳು, ಬಸ್ಟನ್ ಕೇಟನ್ ನಟಿಸಿದ ಸಿನಿಮಾಗಳು, ಪಿಂಕ್ ಪ್ಯಾಂಥರ್ ಸೀರೀಸಿನ ಸಿನಿಮಾಗಳು, ಆಡ್ರಿ ಹೆಪ್ ಬರ್ನ್ ನಟನೆಯ ಚಿತ್ರಗಳು – ಮನರಂಜನೆಯ ದೃಷ್ಟಿಯಲ್ಲೇ ನೋಡಿ ಮೆಚ್ಚಿದ್ದವು. ಅದೇ ಆಗ ವೆಸ್ಟ್ರನ್ ಸಿನಿಮಾಗಳೂ ಲಗ್ಗೆ ಹಾಕುತ್ತಿದ್ದವು. ಕೌಬಾಯ್ ಸಿನಿಮಾಗಳೆಂದು ಇವು ಹೆಸರುವಾಸಿಯಾಗಿದ್ದವು. ಹರಕಲು ಬಟ್ಟೆತೊಟ್ಟು ತಲೆಗೆ ಒಂದು ವಕ್ರವಾದ ಹ್ಯಾಟು ಧರಿಸಿ ಸೊಂಟಕ್ಕೆ ಸಡಿಲ ಬೆಲ್ಟು ಮತ್ತು ಅದಕ್ಕೆ ರಿವಾಲ್ವರ್ ಸಿಕ್ಕಿಸಿಕೊಂಡು ರಸ್ತೆಯಲ್ಲಿಯೇ ಢಂಢಂಢಂಢಂ ಎಂದು ಗುಂಡು ಹಾರಿಸುತ್ತಾ ಎದುರಾಳಿಯ ಮೇಲೆ ಆಕ್ರಮಣ ಮಾಡುತ್ತಿದ್ದ ಹಲವಾರು ಸಿನಿಮಾಗಳು ಒಂದೇರೀತಿಯ ಕಥೆ ಮತ್ತು ಒಂದೇರೀತಿಯ ಸೆಟ್ಟಿಂಗಿನಲ್ಲಿ ಬಂದು ಬಂದು ಹೋಗುತ್ತಿದ್ದವು! ಫಾರ್ ಎ ಫ್ಯೂ ಡಾಲರ್ಸ್ ಮೋರ್ ಎನ್ನುವ ಒಂದು ಚಿತ್ರ ಸುಮಾರು ದಿವಸ ಓಡಿತ್ತು. ಸುಮಾರು ದಿವಸ ಅಂದರೆ ಮಾಮೂಲಾಗಿ ಪ್ರತೀ ವಾರ ಸಿನಿಮಾ ಬದಲಾಗುತ್ತಿದ್ದು ಈ ಸಿನಿಮಾ ಎರಡು ವಾರ ಓಡಿತ್ತು! ಇದೇ ಧಾಟಿಯಲ್ಲಿ ಇದಕ್ಕೆ ಸ್ವಲ್ಪ ದಿವಸ ಮೊದಲು ಗುಡ್ ಬ್ಯಾಡ್ ಅಂಡ್ ಅಗ್ಲಿ ಎನ್ನುವ ಸಿನಿಮಾ ಬಂದಿತ್ತು. ಆಗ ಎಲ್ಲರ ಬಾಯಲ್ಲೂ ಈ ಸಿನಿಮಾದ್ದೇ ಮಾತು. ಇದು ಆಗ ಅತಿ ಹೆಚ್ಚು ವಾರ ಓಡಿದ ರೆಕಾರ್ಡ್ ಹೋಲ್ಡರು! ಅದರಲ್ಲಿ ಹಿನ್ನೆಲೆ ವಾದ್ಯ ಸಂಗೀತ ಆಗಿನ ಅಚ್ಚುಮೆಚ್ಚಿನದ್ದು ಮತ್ತು ಆಗಿನ ಆರ್ಕ್ರೆಸ್ಟ್ರಾದಲ್ಲಿ ಈ ಹಾಡು ಆರೇಳು ಬಾರಿ ಒನ್ಸ್ ಮೋರ್ ಬಲವಂತದ ಮೇಲೆ ಮತ್ತೆ ಮತ್ತೆ ಕೇಳಿಬರುತ್ತಿತ್ತು. ಈಗಿನ ಪೀಳಿಗೆಗೆ ಈ ಆರ್ಕೆಸ್ಟ್ರಾದ ಬಗ್ಗೆ ಕೊಂಚ ವಿವರ ಕೊಡಬೇಕು. ನಗರದಲ್ಲಿ ಸಂಗೀತ ಅದರಲ್ಲೂ ಸಿನಿಮಾ ಸಂಗೀತ ವಾದ್ಯಗಳೊಂದಿಗೆ ಹಾಡುವವರ ಹಲವಾರು ಗುಂಪುಗಳಿದ್ದವು – ಅವುಗಳಿಗೆ ಆರ್ಕೆಸ್ಟ್ರಾ ಎಂದು ಹೆಸರಿತ್ತು – ಹಾಗೂ ಪ್ರತಿ ಶನಿವಾರ ಮತ್ತು ಭಾನುವಾರ ಸರ್ಕಾರ ಈ ಗುಂಪುಗಳಿಂದ ಕಬ್ಬನ್ ಪಾರ್ಕಿನಲ್ಲಿ ಕಾರ್ಯಕ್ರಮ ಆಯೋಜಿಸುತ್ತಿತ್ತು. ಈ ಆರ್ಕೆಸ್ಟ್ರಾಗಳಿಗೆ ಜನ ಕಿಕ್ಕಿರಿದು ಸೇರುತ್ತಿದ್ದರು. ಅಲ್ಲಿ

ಸಿನಿಮಾ ಹಾಡುಗಳು ಮೊಳಗುತ್ತಿದ್ದವು ಮತ್ತು ಈ ಕಾರ್ಯಕ್ರಮ ಆಗಿನ ಅತ್ಯಂತ ಜನಪ್ರಿಯ ಕಾರ್ಯಕ್ರಮಗಳಲ್ಲಿ ಒಂದು. ಇವೇ ಆರ್ಕೆಸ್ಟ್ರಾಗಳು ಗಣೇಶ ಹಬ್ಬ, ನಾಡಹಬ್ಬ ಮೊದಲಾದ ಸಮಾರಂಭಗಳಲ್ಲೂ ಕಾರ್ಯಕ್ರಮ ನೀಡುತ್ತಿದ್ದವು. ಅದರಲ್ಲಿ ಹಾಡಿ, ವಾದ್ಯ ನುಡಿಸಿದ ಹಲವಾರು ಪ್ರತಿಭೆಗಳು ಮುಂದೆ ಸಿನಿಮಾ ಪ್ರವೇಶಿಸಿದವು. ಈಗ ಈ ರೀತಿಯ ಆರ್ಕೆಸ್ಟ್ರಾಗಳು ಕಬ್ಬನ್ ಪಾರ್ಕಿನಲ್ಲಿ ನಡೆಯುತ್ತಿರುವಂತೆ ಕಾಣುತ್ತಿಲ್ಲ. ತೀರಾ ಈಚೆಗೆ ಅಲ್ಲಿ ನಮ್ಮ ಪೊಲೀಸ್ ಬ್ಯಾಂಡಿನ ವಾದ್ಯಗೋಷ್ಠಿ ನಡೆದಿತ್ತು. ಈ ಸಿನಿಮಾ ಬಂದು ಅದೆಷ್ಟೋ ವರ್ಷಗಳ ನಂತರ ನಮ್ಮ ಕನ್ನಡದ ಒಂದು ಸಿನಿಮಾ ಈ ಗುಡ್ ಬ್ಯಾಡ್ ಅಂಡ್ ಅಗ್ಲಿ ಎನ್ನುವ ಸಿನಿಮಾದ ಹಾಡು ಹಿನ್ನೆಲೆಯಾಗಿ ಉಪಯೋಗಿಸಿತ್ತು! ಆಗಲೂ ಅದಕ್ಕೆ ಅದೇ ರೀತಿಯ ಮೆಚ್ಚುಗೆ ದೊರೆತಿತ್ತು! ನಗರ ಪ್ರದೇಶದಲ್ಲಿನ ಸಿನಿಮಾ ಮಂದಿರಗಳಲ್ಲಿ ಹಳೇ ಇಂಗ್ಲಿಷ್ ಸಿನಿಮಾಗಳು ಪ್ರದರ್ಶಿತವಾದರೆ ಕೊಂಚ ಹೊಸಾ ಸಿನಿಮಾ ನೋಡಬೇಕು ಅಂದರೆ ದಂಡು ಪ್ರದೇಶ ಯಾನೆ ಕಂಟೋನ್ಮೆಂಟಿಗೆ ಹೋಗಬೇಕಿತ್ತು. ಹೊಸಾದು ಅಂದರೆ ನಗರ ಪ್ರದೇಶದಲ್ಲಿ ಪ್ರದರ್ಶನ ಆಗುವ ಮೊದಲು ಇಲ್ಲಿ ಪ್ರದರ್ಶಿತವಾಗುತ್ತಿತ್ತು ಅಷ್ಟೇ. ಒಮ್ಮೆ ಅಮೇರಿಕಾದಿಂದ ಬಂದಿದ್ದ ಗೆಳೆಯರೊಬ್ಬರನ್ನು ಪ್ಲಾಜಾ ಥಿಯೇಟರಿಗೆ ಓಯ್ದಿದ್ದೆ – ಅಲ್ಲಿ ಹೊಸಾ ಸಿನಿಮಾ ಬಂದಿದೆ ಬನ್ನಿ ಅಂತ. ಸಿನಿಮಾ ಪೋಸ್ಟರ್ ನೋಡಿಯೇ ಅವರು ಹೋ ಇದು ಸಾಟರ್ಡೇ ಸಿನಿಮಾ ಅಂದರು. ಹಳೇ ಸಿನಿಮಾಗಳನ್ನು ಅಲ್ಲಿ ಶನಿವಾರ ಹಾಕುತ್ತಾರಂತೆ. ದಂಡು ಪ್ರದೇಶದಲ್ಲಿ ರೆಕ್ಸ್, ಪ್ಲಾಜಾ, ಅಪೇರಾ, ಇಂಪೀರಿಯಲ್ ಇವು ಹಳೆಯ ಚಿತ್ರಮಂದಿರಗಳು. ನಂತರ ಹುಟ್ಟಿಕೊಂಡ ಗ್ಯಾಲಾಕ್ಸಿ, ಬ್ಲುಮೂನ್, ಬ್ಲೂಡೈಮಂಡ್, ಲಿಡೋ ಮೊದಲಾದವು ಬರೇ ಇಂಗ್ಲಿಷ್ ಸಿನಿಮಾಗಳಿಗೇ ಮೀಸಲಾಗಿದ್ದವು. ದಂಡಿನ ಚಿತ್ರಮಂದಿರಗಳು ರಾಜ್ಯೋತ್ಸವದ ಒಂದು ದಿವಸ ಮಾತ್ರ ಒಂದು ಶೋ ಕನ್ನಡ ಚಿತ್ರಪ್ರದರ್ಶನ ಮಾಡುತ್ತಿದ್ದವು! ಈ ಚಿತ್ರಮಂದಿರಗಳಲ್ಲೂ ನಾನು ಮಿತ್ರರ ಸಂಗಡ ಹಲವಾರು ಚಿತ್ರಗಳನ್ನು ನೋಡಿದ್ದುಂಟು. ರೆಕ್ಸ್‌ನಲ್ಲಿ ಹಲವಾರು ಕ್ಲಾಸಿಕ್ಸ್ ಚಿತ್ರಗಳು ಬರುತ್ತಿದ್ದವು. ರೋಮನ್ ಹಾಲಿಡೇ ಅಂತಹ ಒಂದು ಚಿತ್ರ. ಬೆಂಗಳೂರಿನಲ್ಲಿ ಫಿಲ್ಮ್ ಫೆಸ್ಟಿವಲ್ ಆದಾಗ ಗೆಲಾಕ್ಸಿಯಲ್ಲಿ ಹಲವು ಆಫ್ ಬೀಟ್ ಚಿತ್ರಗಳನ್ನು ಪ್ರದರ್ಶಿಸಲಾಯಿತು. ಆಗ ನೋಡಿದ ಕೆಲವು ಚಿತ್ರಗಳೆಂದರೆ ಉಸ್ಕಿ ರೋಟಿ ಮೊದಲಾದ ಎನ್.ಎಫ್.ಡಿ.ಸಿ.ಯ ಚಿತ್ರಗಳು. ಚಿತ್ರ ಆರಂಭವಾಗಿ ಒಂದುಗಂಟೆಯಾದರೂ ಮುಂದುವರಿಯುತ್ತಲೇ ಇರಲಿಲ್ಲ! ಇಂಥಹ ಚಿತ್ರಗಳನ್ನು ನೋಡಿದ ನಂತರ ಮನೇಗೆ ಬಂದು ಎರಡು ಸಾರಿಡಾನ್ ತೆಗೆದುಕೊಂಡು ನೆತ್ತಿಮೇಲೆ ತಣ್ಣೀರು ಸುರಿದುಕೊಂಡು ತಲೆನೋವು ಕಡಿಮೆ ಮಾಡಿಕೋಬೇಕು ಅಂತ ಅನಿಸುತ್ತಿತ್ತು! ಪ್ರತೀವಾರ ಅಥವಾ ಪ್ರತೀದಿವಸ ದಂಡು ಪ್ರದೇಶಕ್ಕೆ ಬಂದು ಇಲ್ಲಿನ ಚಿತ್ರ ನೋಡುವುದು ಒಂದು ಅಭ್ಯಾಸವಾಗಿತ್ತು ಮತ್ತು ಎಷ್ಟೋಸಲ ನೋಡಲು ಚಿತ್ರಗಳು ಇರುತ್ತಿರಲಿಲ್ಲ! ಆಗಲೇ ನೋಡಿ ಮುಗಿಸಿ ಆಗಿರುತ್ತಿತ್ತು!

ಕಾರ್ಖಾನೆಗೆ ಉದ್ಯೋಗಕ್ಕೆ ಸೇರಿದ ನಂತರ ಅಲ್ಲಿ ಒಂದು ಥಿಯೇಟರ್ ಇದ್ದು ಅದರಲ್ಲಿ ಪ್ರಮುಖವಾಗಿ ನಾಟಕಗಳನ್ನು ಆಡುತ್ತಿದ್ದರು. ಅದರಲ್ಲಿ ಒಂದು ಪ್ರೊಜೆಕ್ಟರ್

ಇಟ್ಟುಕೊಂಡು ವಾರಕ್ಕೊಮ್ಮೆ ಸರದಿ ಪ್ರಕಾರ ಕನ್ನಡ, ತೆಲುಗು, ತಮಿಳು, ಹಿಂದಿ..... ಹೀಗೆ ಬೇರೆ ಬೇರೆ ಭಾಷೆಯ ಚಿತ್ರಗಳನ್ನು ಪ್ರದರ್ಶಿಸುತ್ತಿದ್ದರು. ನಗರ ಪ್ರದೇಶದಲ್ಲಿ ಫಿಲ್ಮ್‌ಕ್ಲಬ್‌ಗಳನ್ನು ಆರಂಭಿಸಿ ಅವುಗಳಲ್ಲಿ ಹೊರದೇಶದ ಉತ್ತಮ ಚಿತ್ರಗಳನ್ನು ಪ್ರದರ್ಶಿಸುವ ಅಭ್ಯಾಸ ಆರಂಭವಾಗಿತ್ತು. ಜತೆಗೆ ಫಿಲಂ ಅಪ್ರಿಷಿಯೇಷನ್ ಕುರಿತ ಹಾಗೆ ಒಂದು ಚಳುವಳಿ ರೂಪುಗೊಂಡಿತ್ತು. ಇದಕ್ಕೆ ಪೂರಕವಾಗಿ ಒಂದು ಫಿಲ್ಮ್‌ಕ್ಲಬ್ ನಮ್ಮ ಕಾರ್ಖಾನೆಯ ಲಲಿತ ಕಲಾ ಸಂಘದ ಅಡಿಯಲ್ಲಿ ಆರಂಭವಾಯಿತು. ಅಲ್ಲಿ ಹೊರದೇಶದ ಚಿತ್ರಗಳನ್ನು ಹಾಗೂ ನಮ್ಮ ಪುಣೆಯ ಚಿತ್ರಾಗಾರದಿಂದ ಉತ್ತಮ ಕಮರ್ಷಿಯಲ್ ಅಲ್ಲದ ಚಿತ್ರಗಳ ಪ್ರದರ್ಶನದ ಏರ್ಪಾಡು ಆಗಿತ್ತು. ಒಂದು ವಾರ - ಹತ್ತು ದಿವಸ ನಡೆಯುತ್ತಿದ್ದ ಈ ಫಿಲ್ಮ್ ಫೆಸ್ಟಿವಲ್‌ನಲ್ಲಿ ಎಲ್ಲಾ ಭಾರತೀಯ ಭಾಷೆಗಳ ಚಿತ್ರಗಳೇ ಅಲ್ಲದೇ ಹೊರದೇಶದ ಚಿತ್ರಗಳೂ ಇರುತ್ತಿದ್ದವು.

ಇಲ್ಲಿ ಹಲವಾರು ಅತ್ಯುತ್ತಮ ಚಿತ್ರಗಳನ್ನು ನೋಡಿ ಚಿತ್ರಗಳನ್ನು ನೈಜ ಅರ್ಥದಲ್ಲಿ ಅಪ್ರಿಷಿಯೇಟ್ ಮಾಡುವುದು ರೂಢಿಯಾಯಿತು. ಸತ್ಯಜಿತ್‌ರೇ ಅವರ ಚಿತ್ರಗಳನ್ನು ಇಲ್ಲೇ ಮೊದಲಬಾರಿ ನೋಡಿದ್ದು. ಅಪೂ ಸಂಸಾರ್, ಪಥೇರ್ ಪಾಂಚಾಲಿ, ಸ್ತ್ರೀ ಮೊದಲಾದ ಚಿತ್ರಗಳು ಮಾಡಿದ ಮೋಡಿ ನಂತರದ ದಿವಸಗಳಲ್ಲಿ ರೇ ಅವರ ಚಿತ್ರಗಳು ಎಲ್ಲಿ ಪ್ರದರ್ಶಿತವಾಗುತ್ತಿದೆ ಅಂದರೂ ಹೋಗಿ ನೋಡುವ ಹವ್ಯಾಸವನ್ನು ಬೆಳೆಸಿತು. ಹೀಗಾಗಿ ರೇ ಅವರ ಸುಮಾರು ಚಿತ್ರಗಳನ್ನು ನೋಡಿದೆ. ಸೋನಾರ್ ಕೆಲ್ಲಾ, ಶತರಂಜ್ ಕಿ ಕಿಲಾರಿ, ಮೊದಲಾದವು ಹೀಗೆ ನೋಡಿದವು.

ಈ ಫಿಲ್ಮ್ ಕ್ಲಬ್ಬಿನಲ್ಲಿಯೇ ಮೊದಲಬಾರಿಗೆ ಬೈಸಿಕಲ್ ಥೀವ್ಸ್ ನೋಡಿದ ಅನುಭವ ಹೇಗಿತ್ತು ಅಂದರೆ ಸುಮಾರು ತಿಂಗಳು ಅದರ ಗುಂಗಿನಿಂದ ಆಚೆ ಬರಲು ಆಗಿರಲಿಲ್ಲ! ವೆಟ್ಟೋರಾ ಡಿಸಿಕಾ ಎನ್ನುವ ನಿರ್ದೇಶಕನ ಚಿತ್ರ ಇದು. ಮುಂದೆ ಸಿನಿಮಾ ಬಗ್ಗೆ ಯಾರೇ ಮಾತಾಡಿದರೂ ಈ ಚಿತ್ರದ ಹೆಸರು ಹೇಳದೇ ಮುಂದುವರಿಯುತ್ತಿರಲಿಲ್ಲ. ಈಗಲೂ ಈ ಚಿತ್ರ ಎಲ್ಲೇ ತೋರಿಸಿದರೂ ಹೋಗಿ ನೋಡುತ್ತೇನೆ. ಜತೆಗೆ ಯುಟ್ಯೂಬಿನಲ್ಲಿಯೂ ಈ ಚಿತ್ರವನ್ನು ಹಲವು ಬಾರಿ ನೋಡಿದ್ದೇನೆ. ಅದೇರೀತಿ ನನ್ನ ಮನಸ್ಸು ತಾಗಿದ ಹಲವು ಚಿತ್ರಗಳೆಂದರೆ ಜೀ ಎನ್ನುವ ಒಂದು ಚಿತ್ರ, ಪ್ಯಾಟನ್ ಎನ್ನುವ ಒಂದು ಯುದ್ಧದ ಚಿತ್ರ, ವಾನ್ ರ್‍ಯಾನ್ಸ್ ಎಕ್ಸ್‌ಪ್ರೆಸ್, ಅರೇಬಿಯನ್ ನೈಟ್ಸ್.... ಇಂಥಹವುಗಳೇ ಅಲ್ಲದೇ ನಮ್ಮ ದೇಸೀ ಚಿತ್ರಗಳೂ ಆಕರ್ಷಿಸಿವೆ. ನಾಗೇಂದ್ರರಾಯರ ವಸಂತಸೇನಾ ಹೀಗೆ ನೋಡಿದ ಚಿತ್ರಗಳಲ್ಲಿ ಒಂದು. ಅದೇರೀತಿ ಒಂದುಚಿತ್ರ ಅದರ ಹೆಸರಿನಿಂದಲೇ ಆಕರ್ಷಿಸಿತ್ತು - ಅದು ಅಗ್ರಹಾರತ್ತಿಲ್ ಒರುಕಲದೈ.. ಎಂದೇನೋ ಇರಬೇಕು. ತಮಿಳು ಸಿನಿಮಾಗಳಿಗೆ ಬಹಳ ಉದ್ದದ ಹೆಸರು ಇರುತ್ತದೆ ಎಂದು ಬೀಚಿ ಮಾಡಿದ್ದ ಒಂದು ಜೋಕು ನೆನಪಿಗೆ ಬರುತ್ತಿದೆ - ಒಂದು ತಮಿಳು ಚಿತ್ರದ ಹೆಸರು ಹೀಗಿತ್ತಂತೆ - ಮಂಡ್ಯಂ ಸೆಲ್ವಪುಳ್ಳೆ ಅಯ್ಯಂಗಾರಿ ಮೋಟರ್ ಸೈಕಲ್ ಏರಿ ಉಳುಂದು ಪೋಯಿಟ್ಟಾಆಆಆ ಅಂತ!

ನಾವು ಹದಿವಯಸ್ಸಿನಲ್ಲಿರುವಾಗ್ಗೆ ಸುಮಾರು ಮಳಯಾಳಿ ಭಾಷೆಯ ಪೋಲಿ ಚಿತ್ರಗಳು ನಮ್ಮ ಊರಿನ ಚಿತ್ರಮಂದಿರಗಳಲ್ಲಿ ಮಾರ್ನಿಂಗ್ ಶೋ ಓಡುತ್ತಿದ್ದವು. ಅವುಗಳನ್ನು ಹಸಿಬಿಸಿ ಚಿತ್ರ ಅನ್ನುತ್ತಿದ್ದರು. ಅವಳೊಡೆ ರಾಹುಕಲ್ ಅನ್ನುವ ಹೆಸರಿನ ಚಿತ್ರ ನೋಡಿದ ನೆನಪು ಇದೆ! ಹಸಿಬಿಸಿ ಚಿತ್ರಗಳು ಬೆಂಗಳೂರಿಗರನ್ನು ಸುಮಾರು ವರ್ಷ ಆಳಿತು – ಅದೂ ನಮ್ಮ ಮಡಿವಂತ ಪ್ರೇಕ್ಷಕರ ತಕರಾರಿನ ನಡುವೆ.

ಒಬ್ಬರು ಒಂದು ದಿವಸದಲ್ಲಿ ಎಷ್ಟು ಸಿನಿಮಾ ನೋಡಬಹುದು? ನನ್ನ ಗೆಳೆಯನೊಬ್ಬ ದಿವಸಕ್ಕೆ ನಾಲ್ಕು ಸಿನಿಮಾದಂತೆ ಒಂದು ವರ್ಷದಲ್ಲಿ ಒಂದು ದಿನವೂ ಬಿಡದ ಹಾಗೆ 1464 ಸಿನಿಮಾ ನೋಡಿದ್ದಾನೆ. ಇದು ನನ್ನ ಪ್ರಕಾರ ದಾಖಲೆ – ಆ ವರ್ಷ ಅಧಿಕ ವರ್ಷವಾಗಿತ್ತಂತೆ!

ಆಕಾಲದಲ್ಲಿ ಚಲನಚಿತ್ರ ಪ್ರಶಸ್ತಿಗಳನ್ನು ಕೇಂದ್ರ ಸರ್ಕಾರ ಘೋಷಿಸಿದಾಗ ಕನ್ನಡ ಭಾಷೆಯ ಚಿತ್ರಗಳು ಸ್ವರ್ಣ ಕಮಲ ಪಡೆಯುತ್ತಿರಲಿಲ್ಲ. ಬರೀ ಬಂಗಾಳಿ ಭಾಷೆಯ ಚಿತ್ರಗಳೇ ಇವನ್ನು ಪಡೆಯುತ್ತಿದ್ದವು. ಇದರಿಂದ ಬೇಸರಗೊಂಡ ನಾನು ಒಂದು ಪ್ರತಿಜ್ಞೆ ಮಾಡಿದ್ದೆ. ಕನ್ನಡ ಚಿತ್ರ ಸ್ವರ್ಣ ಕಮಲ ಪಡೆಯುವವರೆಗೆ ಬಂಗಾಳಿ ಚಿತ್ರ ನೋಡುವುದಿಲ್ಲ ಅಂತ! ಕೇಂದ್ರ ಸರ್ಕಾರ ನಡುಗಿಬಿಡ್ತು, ಅದೇವರ್ಷ ಮೊದಲಬಾರಿಗೆ ಕನ್ನಡ ಸಿನಿಮಾ ಸ್ವರ್ಣ ಕಮಲ ಪಡೆಯಿತು!

ಕನ್ನಡ ಸಿನಿಮಾ ಪ್ರದರ್ಶನಕ್ಕೆ ಎಂದೇ ಬೆಂಗಳೂರಿನಲ್ಲಿ ಭಾರತ್ ಚಿತ್ರಮಂದಿರವಿತ್ತು. ಕನ್ನಡ ಸಿನಿಮಾದ ಮತ್ತೊಂದು ಆಕರ್ಷಣೆ ಎಂದರೆ ಸಿನಿಮಾ ಹಾಡಿನ ಪುಸ್ತಕಗಳು ಥಿಯೇಟರಿನಲ್ಲಿ ಮಾರಾಟವಾಗುತ್ತಿತ್ತು. ಬೇರೆ ಭಾಷೆಯ ಸಿನಿಮಾಗಳಿಗೆ ಈ ಸವಲತ್ತು ಇರಲಿಲ್ಲ!

---

## ಕಪಾಳಮೋಕ್ಷ ಪ್ರಸಂಗ

ಸಿನಿಮಾದ ಷೂಟಿಂಗ್ ನಡೀತಾ ಇತ್ತು. ನಾಯಕಿ ತನ್ನ ಗಂಡನಿಗೆ ಕಪಾಳಕ್ಕೆ ಹೊಡೆಯುವ ದೃಶ್ಯ. ನಿರ್ದೇಶಕ ಬಂದು ನಟಿಗೆ ಸನ್ನಿವೇಶ ವಿವರಿಸಿ ನೀವು ನಿಮ್ಮ ಕೈಯನ್ನು ಜೋರಾಗಿ ನಾಯಕನ ಕೆನ್ನೆಯ ಬಳಿ ತೆಗೆದುಕೊಂಡು ಹೋಗಿ ನಿಲ್ಲಿಸಿದರೆ ಸಾಕು ಎಂದು ಹೇಳಿದ. ಆದರೆ ಟೇಕ್ ನಲ್ಲಿ ನಾಯಕಿ ನಾಯಕನ ಕಪಾಳಕ್ಕೆ ಜೋರಾಗಿ ಹೊಡೆದೇಬಿಟ್ಟಳು. ಟೇಕ್ ಓಕೆ ಆಯಿತು. ನಿರ್ದೇಶಕ ಬಂದು ನಿಮ್ಮ ನಿಜ ಜೀವನದ ಅನುಭವವನ್ನೆಲ್ಲಾ ಧಾರೆಯೆರೆದು ಈ ದೃಶ್ಯದಲ್ಲಿ ಚೆನ್ನಾಗಿ ಅಭಿನಯಿಸಿದಿರಿ ಮೇಡಂ ಎಂದಾಗ ನಟೀಮಣಿ ಪೆಚ್ಚು.

# ಸಾಮರಸ್ಯದ ಗುಟ್ಟು

**- ವಿದ್ಯಾ ವಿ. ಹಾಲಭಾವಿ**

**ತ**ಮ್ಮ ಮದುವೆಯ 25ನೇ ವಾರ್ಷಿಕೋತ್ಸವವನ್ನು ಬಲು ಅದ್ದೂರಿಯಿಂದ ಆ ದಂಪತಿಗಳು ಆಚರಿಸಿಕೊಳ್ಳುತ್ತಿದ್ದರು. ಬಹಳ ಅಚ್ಚರಿಯ ಸಂಗತಿಯೆಂದರೆ ಕಳೆದ ಇಪ್ಪತ್ತೈದು ವರ್ಷಗಳ ದಾಂಪತ್ಯ ಜೀವನದಲ್ಲಿ ಒಂದೇ ಒಂದು ದಿನವೂ ಸಹ ಅವರಿಬ್ಬರು ಜಗಳವಾಡಿರಲಿಲ್ಲ. ಬಹಳ ಅನ್ಯೋನ್ಯ ಜೋಡಿಯೆಂದು ಅವರು ಆ ಊರಿನಲ್ಲಿ ಹೆಸರುಗಳಿಸಿದ್ದರು. ಇದನ್ನು ತಿಳಿದ ಆ ಊರಿನ ಪತ್ರಿಕೆಯ ಸಂಪಾದಕನೊಬ್ಬ ಅವರಿಬ್ಬರ ಸಾಮರಸ್ಯ ಸಂಸಾರದ ಗುಟ್ಟನ್ನು ತಿಳಿಯಬೇಕೆಂಬ ಕುತೂಹಲದಿಂದ ಆ ದಿನದ ಕಾರ್ಯಕ್ರಮಕ್ಕೆ ಬಂದಿದ್ದನು. ಆತ ಗಂಡನನ್ನು ಮಾತಾಡಿಸುತ್ತಾ, ''ಸರ್, ನೀವಿಬ್ಬರೂ ಮದುವೆಯಾಗಿ ಇಷ್ಟೊಂದು ವರ್ಷಗಳ ಕಾಲ ಅನ್ಯೋನ್ಯವಾಗಿರುವುದು ನಂಬಲು ಅಸಾಧ್ಯವಾದ ಆಶ್ಚರ್ಯಕರ ಸಂಗತಿ. ಇದು ನಿಮಗೆ ಹೇಗೆ ತಾನೇ ಸಾಧ್ಯವಾಯಿತು?'' ಎಂದು ಪ್ರಶ್ನಿಸಿದ. ಆಗ ತನ್ನ ಹನಿಮೂನ್ ದಿನಗಳನ್ನು ನೆನಪು ಮಾಡಿಕೊಳ್ಳುತ್ತಾ ಗಂಡ ಹೇಳಿದ ''ಮದುವೆಯಾದ ನಂತರ ನಾವು ಹನಿಮೂನ್‌ಗೆಂದು ಶಿಮ್ಲಾಗೆ ಹೋದೆವು. ಅಲ್ಲಿ ಕುದುರೆ ಸವಾರಿ ಮಾಡೋಣವೆಂದು ಅಂದುಕೊಂಡು ನಾವಿಬ್ಬರೂ ಬೇರೆ ಬೇರೆ ಕುದುರೆಯ ಮೇಲೆ ಕುಳಿತುಕೊಂಡು ಸವಾರಿ ಹೊರಟೆವು. ನಾನು ಏರಿದ ಕುದುರೆ ಬಹಳ ಸಾಧು ಇತ್ತು. ಆದರೆ ನನ್ನ ಹೆಂಡತಿ ಏರಿದ ಕುದುರೆಯು ಸ್ವಲ್ಪ ಉನ್ಮಾದತೆ ಹೊಂದಿತ್ತು. ಹಾಗೆಯೇ ಮುಂದೆ ಸಾಗುತ್ತಿರುವಾಗ ಆ ಕುದುರೆ ಇದ್ದಕ್ಕಿದ್ದಂತೆ ನೆಗೆದು, ನನ್ನ ಹೆಂಡತಿಯನ್ನು ಕೆಳಗೆ ಬೀಳಿಸಿತು. ಆಕೆ ಕೊಡವಿ ಮೇಲೆದ್ದು ''ಇದು ಮೊದಲ ಸಲ'' ಎಂದು ಹೇಳಿ ಅದರ ಬೆನ್ನು ತಟ್ಟಿ ಮತ್ತೆ ಕುಳಿತುಕೊಂಡಳು. ನಮ್ಮ ಸವಾರಿ ಮುಂದೆ ಸಾಗುತ್ತಿರುವಾಗ ಆ ಕುದುರೆ ಮತ್ತೊಂದು ಬಾರಿ ನೆಗೆದು ಪುನಃ ಆಕೆಯನ್ನು ಬೀಳಿಸಿತು. ಆಕೆ ಸಮಾಧಾನದಿಂದಲೇ ''ಇದು ಎರಡನೇ ಸಲ'' ಎಂದು ಹೇಳಿ ಅದನ್ನೇರಿ ಕುಳಿತು ಪಯಣ ಮುಂದುವರೆಸಿದಳು. ಮೂರನೆಯ ಬಾರಿ ಆ ಕುದುರೆ ಆಕೆಯನ್ನು ಬೀಳಿಸಿದಾಗ, ಆಕೆ ಏನೊಂದೂ ಮಾತಾಡದೇ ತನ್ನ ಪರ್ಸ್‌ನಿಂದ ಪಿಸ್ತೂಲನ್ನು ತೆಗೆದು ಅದಕ್ಕೆ ಗುರಿಯಿಟ್ಟು ಗುಂಡು ಹೊಡೆದಳು ಆ ಕುದುರೆ ಸತ್ತೇ ಹೋಯಿತು. ಆಗ ನಾನು ನನ್ನ ಹೆಂಡತಿಗೆ ''ನಿನ್ನ ತಲೆಗಿಲೆ ಕೆಟ್ಟಿದೆಯೇ, ಪಾಪ ಆ ಮುಗ್ಧ ಪ್ರಾಣಿಯನ್ನು ಸಾಯಿಸಿಬಿಟ್ಟೆಯಲ್ಲಾ. ನಿನಗೇನಾದರೂ ಹುಚ್ಚುಗಿಚ್ಚು ಹಿಡಿಯಿತೇನು?'' ಎಂದು ಕೂಗಿದೆ. ಅದಕ್ಕೆ ಪ್ರತಿಕ್ರಿಯಿಸಿದ ಅವಳು ''ಇದು ಮೊದಲ ಸಲ'' ಎಂದು ಹೇಳಿದಳು. ನಾನು ಗಪ್ ಚುಪ್. ಅದಷ್ಟೇ ನಡೆದದ್ದು ಕಣ್ರಿ. ಅಂದಿನಿಂದ ನಾವಿಬ್ಬರು ಬಹಳ ಸಂತೋಷವಾಗಿದ್ದೇವೆ!!!!!!!

*(ಸಂಗ್ರಹ)*

✷

# ಪಾದಾರವಿಂದ

**- ಪ್ರಕಾಶ್**

ನನ್ನ ಹಳೆಯ ಶೂಗಳು - ನನ್ನ ಮುಖದಂತೆಯೇ - ಕಾಂತಿಹೀನವಾದಾಗ ಹೊಸ ಪೇರ್ ಕೊಳ್ಳುವ ಆಸೆಯಾಯಿತು. ಬಜಾರಿನಲ್ಲಿ ನಡೆದಾಡಿದೆ. 'ಪಾದ-ರಕ್ಷಾ' ಅಂತ ಒಂದು ಅಂಗಡಿ ಕಣ್ಣಿಗೆ ಬಿತ್ತು. 'ಆಲ್ ಟೈಪ್ಸ್ ಆಫ್ ಶೂಸ್' ಅಂತ ಜಾಹೀರಾತು ಸಹ ಇತ್ತು. ಸರಿ ಅಂತ ಒಳಗೆ ನುಗ್ಗಿದೆ. ಒಬ್ಬ ಚೂಟಿಯಾದ ಹುಡುಗ ಬಂದ. ನನಗೆ ಶೂಗಳು ಬೇಕಪ್ಪ ಅಂದೆ. ಯಾವುದು ಸಾರ್, ಲಾಕಿಂಗೋ, ಜಾಗಿಂಗೋ, ಆಫೀಸಿಗೋ, ಕ್ಯಾಶುಲ್ ಶೂಸ್ ಬೇಕೋ ಅಂದೆ. ನಾನು ಕ್ಯಾಶುಲ್ ಅಂತ ಅಂದೆ. ಲೇಸ್ ಇರೋದೋ, ಇಲ್ಲದಿರೋದೋ ಅಂದ. ಇಲ್ಲದೇ ಇರೋದು ಲೇಸು ಅಂದೆ ಗಹಗಹಿಸಿ ನಕ್ಕ. ಕೂತುಕೊಳ್ಳಿ ಸಾರ್ ಅಂದು ಒಂದು ಸ್ಟೂಲ್ ಕಾಲಿಡುಕ್ಕೆ ಇಟ್ಟ. ಅದರಲ್ಲಿ ವಿವಿಧ ಸೈಜುಗಳು ಮಾರ್ಕ್ ಆಗಿದ್ದವು. ನಾನು ಬಲ ಪಾದವನ್ನಿಟ್ಟೆ. ಸಾಕ್ಸ್ ತೆಗೀರಿ ಸಾರ್ ಅಂದ. ತೆಗೆದೆ, ನಂಬರ್ ಸೆವೆನ್ ಅಂದ. ಎಡಗಾಲೂ ಇಡಿ ಅಂದ. ನಾನು ಚಕಿತನಾದೆ; ಯಾಕಪ್ಪ ಅಂದೆ. ಸೈಸ್ ನೋಡುಕ್ಕೆ ಅಂದ. ಅವನ ಮುಖದ ಮೇಲೆ ಒಂದು ನಗು ಮೂಡಿ ಮಾಯವಾಯಿತು. ಚಿಂತಾಕ್ರಾಂತನಾಗಿ ನನ್ನ ಪಾದಗಳನ್ನೇ ದಿಟ್ಟಿಸಿದ. ನನಗೆ ಗಾಬರಿ ನಮ್ಮ ಸೀನಿಯರ್‌ನ ಕರೀತೀನಿ ಸಾರ್ ಅಂತ ಹೋದ. ಅವನ ಸೀನಿಯರ್ ಕೈಲಿ ಒಂದು ಟೇಪ್ ತೆಗೊಂಡು ಬಂದರು. ನನ್ನ ಪಾದಗಳು ನಿಖರವಾಗಿ ಅಳೆಯಲ್ಪಟ್ಟವು. 'ಗುಡ್ ವರ್ಕ್ ಸುರೇಶ್' ಅಂತ ಸೀನಿಯರ್ ಜೂನಿಯರ್‌ಗೆ ಶ್ಲಾಘಿಸಿದರು ಸಾರ್, ನಿಮ್ಮ ಎಡಪಾದ ಬಲಪಾದಕ್ಕಿಂತ ಮುಕ್ಕಾಲು ಇಂಚು ಕಮ್ಮಿ ಇದೆಯಲ್ಲ ಅಂತ ಇಬ್ಬರೂ ಸಂತಾಪಪಟ್ಟರು. ಇತರ ಗಿರಾಕಿಗಳೂ ನನ್ನ ಕಾಲುಗಳನ್ನ ಚಕಿತರಾಗಿ ನೋಡುತ್ತಿದ್ದರು. ನನಗೆ ರೇಗಿತು! ಈಗ ಏನು ಮಾಡೋಣ ಅಂದೆ ಸುರೇಶ್ ನಿಧಾನವಾಗಿ ಹೇಳಿದ. ನೀವು ಇಷ್ಟು ದಿನ ಹೀಗೇ ನಡೀತಿದ್ರಲ್ಲ, ಕಾಲಿಗೆ ಸ್ಟ್ರೈನ್ ಆಗುತ್ತೆ ಸಾರ್. ಪಾದಕ್ಕೆ ತಕ್ಕ ಶೂ ಇರಬೇಕು. ನಿಮಗೆ ಒಂದು ಕಾಲಿಗೆ ಸೆವೆನ್ ಇನ್ನೊಂದಕ್ಕೆ 6½ ಕೋಡ್ತೀನಿ ಸಾರ್ ಅಂದ. ಉಳಿದ ಎರಡು ಶೂಗಳನ್ನು ಏನು ಮಾಡ್ತಿರಿ ಅಂದೆ. ನೀವೇ ಕೊಳ್ಳಿ ಸಾರ್, ಡಿಸ್‌ಕೌಂಟ್ ಕೂಡ ಸಿಗುತ್ತೆ ಅಂದ ಸೀನಿಯರ್ ಪುನಃ ಬಂದು ಸಾರ್ ಒಬ್ಬ ಆರ್ಥೋಪೀಡಿಕ್ ಸರ್ಜನ್ ಒಂದು ಸಲ ತೋರಿಸಿ ಅಂತ ನನಗೆ ಗಾಬರಿ ಹುಟ್ಟಿಸಿದ. ನನ್ನ ಸ್ನೇಹಿತ ಒಬ್ಬನ ಮಗನೇ ಆರ್ಥೋಪೀಡಿಕ್, ಅವನ ಹತ್ತಿರ ಹೋದೆ ಅವನು ಎಕ್ಸಾಮಿನ್ ಮಾಡಿ, ಅಂಕಲ್ ಇದಕ್ಕೆಲ್ಲ ಹೆದರಬೇಡಿ, ನಿಮ್ಮ ಹಳೇ ಶೂಗಳನ್ನೇ ಉಪಯೋಗಿಸಿ, ಅಥವಾ ಸೆವೆನ್ ಸೈಜ್ ತಗೊಂಡು ಒಂದರಲ್ಲಿ ಮುಂದೆ ಸ್ಪಾಂಜ್ ಕೂರಿಸಿದರೆ ಸಾಕು ಅಂದ. ಇವನೇನಾದರೂ ಆಪರೇಷನ್ ಅಂತಾನೇನೋ ಅಂತ ಹೆದರಿದ್ದ ನನಗೆ ಅವನ ಐಡಿಯಾ ವೈದ್ಯ ಹೇಳಿದ್ದೂ ಹಾಲು ಅನ್ನ ಅಂದ ಹಾಗಾಯಿತು. ಈಗಲೂ ಅದನ್ನೇ ಪಾದಶಃ ಪಾಲಿಸುತ್ತಾ ಬಂದಿದೀನಿ!

# Advertisement

# Advertisement

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

– ದಂಸಳಿ

- ಬಾಹ್ಯಾಕಾಶದಲ್ಲಿ ಹೂ ಅರಳಿತು ಎಂದು ತಿಳಿದಾಗ ಬಂದ ಒಂದು ಉದ್ಗಾರ: ಆ ಹೂವಿಗೊಂದು ಪುಟ್ಟ ಹೆಜ್ಜೆ ಆದರೆ ಪುಷ್ಪಲೋಕಕ್ಕೊಂದು ದಾಪುಗಾಲು.
- ನೀನು ಹೇಗೆ ಬದುಕಿದೆ ಎಂಬುದನ್ನು ಹೇಳು ನಾನು ಹೇಗೆ ಬದುಕಬೇಕು ಎಂಬುದನ್ನು ಕಂಡುಕೊಳ್ಳುತ್ತೇನೆ.
- ಇದ್ದಲ್ಲಿನಿಂದ ಹಲ್ಲುಜ್ಜುತ್ತಿದ್ದ ಮನುಷ್ಯ ಇಂದು ಟೂತ್‌ಪೇಸ್ಟ್‌ನಲ್ಲಿ ಇದ್ದಿಲು ಇದೆ ಎಂದರೆ ಮಾತ್ರ ಅದನ್ನು ಕೊಳ್ಳುತ್ತಾನೆ.
- ಸ್ಮಾರ್ಟ್ ಸಿಟೀಸ್ ಮೀನ್ಸ್ ವಿ ಶುಡ್ ಬಿ ಏಬಲ್ ಟು ಡು ಸ್ಮಾರ್ಟ್ ಥಿಂಗ್ಸ್.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ನಾನು ಬರೆದಿದ್ದಕ್ಕಾಗಿ, ಬರೆಯಲಾಗದೆ ಇದ್ದದ್ದಕ್ಕಾಗಿ, ಮುಂದೆ ಬರೆಯಬಹುದಾದಕ್ಕಾಗಿ ಮತ್ತು ಬರೆಯುವುದೇ ಇರುವುದಕ್ಕಾಗಿ ನನ್ನನ್ನು ಮನ್ನಿಸಿ.
- ನೀವು ಪ್ರತಿ ದಿನ ಕೆಲವು ತಾಸು ಟೀವಿ ನೋಡಲೇಬೇಕು ಎನ್ನುವವರಾದರೆ ನನಗೆ ಇಷ್ಟವಾದ ಕೆಲಸ ಮಾಡಲು ಸಮಯವೇ ಸಿಗುತ್ತಿಲ್ಲ ಎಂದು ದೂರುವಂತಿಲ್ಲ.
- ಬಹುತೇಕ ಪುರುಷರಿಗೆ ಪತ್ನಿ ಖರೀದಿಸುವ ಎಲ್ಲ ವಸ್ತುಗಳ ಬೆಲೆ ಗೊತ್ತಿರುತ್ತದೆ. ಆದರೆ ಪತ್ನಿಯ ಬೆಲೆ ಮಾತ್ರ ತಿಳಿದಿರುವುದಿಲ್ಲ.
- ಇಟ್ ಈಸ್ ನಾಟ್ ವಾಟ್ ಯು ಗ್ಯಾದರ್ ಬಟ್ ವಾಟ್ ಯು ಸ್ಕ್ಯಾಟರ್ ದಟ್ ಶೋಸ್ ವಾಟ್ ಕೈಂಡ್ ಆಫ್ ಯು ಲಿವ್ಡ್!
- ಗುರುವಿಗೆ ಸಮಾನನಾಗುವ ತನಕ ದೊರೆಯದಲ್ಲ ಮುಕುತಿ.
- ಅನಾಥ ಮಕ್ಕಳೆದರು ಹೆತ್ತ ಮಗುವನ್ನು ಮುದ್ದಿಸಬೇಡಿ.
- ನಮ್ಮ ಆರೋಗ್ಯವೇ ವೈದ್ಯರ ಭಾಗ್ಯ.
- ನಿಮ್ಮ ಪಾಸ್‌ವರ್ಡ್ ನಿಮ್ಮ ಟೂತ್‌ಬ್ರಶ್ ಇದ್ದಂತೆ. ಅದನ್ನು ನೀವು ಮಾತ್ರ ಬಳಸಬೇಕು ಮತ್ತು ಅದನ್ನು ಪ್ರತಿ ತಿಂಗಳು ಬದಲಿಸಬೇಕು.
- ಟು ಟೀಚ್ ಅ ಸಬ್ಜೆಕ್ಟ್ ಈಸ್ ಒನ್ ಆಫ್ ದಿ ಬೆಸ್ಟ್ ವೇಸ್ ಆಫ್ ಲರ್ನಿಂಗ್ ಇಟ್.
- ಪ್ರತಿ ಯಶಸ್ವಿ ಮನುಷ್ಯನ ಹಿಂದೆ ಅಪಾರ ಶ್ರಮ ಇದೆ.
- ಒಮ್ಮೆಲೆ ಎರಡು ಮೊಲಗಳನ್ನು ಹಿಡಿಯಲು ಹೋದರೆ ಎರಡೂ ತಪ್ಪಿಸಿಕೊಳ್ಳುತ್ತವೆ.
- ಅಸಾಧ್ಯ ಎಂಬುದನ್ನು ಅನೇಕ ವೇಳೆ ಪ್ರಯತ್ನಿಸಿರುವುದೇ ಇಲ್ಲ.

# ಮಗುವಿಗೆಂಥಾ ಹೆಸರು

**- ಬೇಲೂರು ರಾಮಮೂರ್ತಿ**

ಬಸ್ ಸ್ಟಾಂಡಿನಲ್ಲಿ ಸುಮಾರು ಜನ ನಿಂತಿದ್ದರು. ಕೆಲವರು ತಮ್ಮ ಊರಿಗೆ ಹೋಗುವ ಬಸ್ಸು ಬರುತ್ತಿದೆಯೇ ಎಂದು ಕತ್ತೆತ್ತಿ ದೂರದವರೆಗೂ ನೋಡುತ್ತಿದ್ದರು. ಬಸ್ ಬರುವಷ್ಟರಲ್ಲಿ ಒಂದು ಕಪ್ ಕಾಫಿ ಕುಡಿಯುವವರು, ಮಕ್ಕಳಿಗೆ ಸೂಸೂ ಮಾಡಿಸಿ ಬರುವವರು, ಹೆಂಡತಿಗೆ ಹೂವು ಕೊಡಿಸುವವರು, ಒಂದು ಸಿಗರೇಟ್ ಸೇದಿಬಿಡೋಣ ಎನ್ನುವವರು ತರಾತುರಿಯಲ್ಲಿ ಅತ್ತಿಂದಿತ್ತ ಇತ್ತಿಂದತ್ತ ಓಡಾಡುತ್ತಿದ್ದರು. ಹಾಗೆ ಓಡಾಡುತ್ತಿದ್ದವರ ಪೈಕಿ ಸುಮಾರಾಗಿದ್ದ ಮಹಿಳೆಯೊಬ್ಬಳು ತನ್ನ ಉದ್ದ ಕೂದಲನ್ನು ಕೆರೆದುಕೊಂಡು ಒಬ್ಬರ ಮುಂದೆ ನಿಂತು ''ನನ್ನ ಮಗೂಗೆ ಒಂದು ಒಳ್ಳೆ ಹೆಸರು ಕೊಡಿ'' ಅಂತ ಕೇಳಿದಳು. ಅವರು ಹೆಂಗಸನ್ನು ವಿಚಿತ್ರವಾಗಿ ನೋಡಿದರು. ಅವಳು ಮತ್ತೆ ಅದೇ ಪ್ರಶ್ನೆ ಕೇಳಿದಳು. ಅದಕ್ಕೆ ಅವರು ''ಎಲ್ಲಿದೆ ನಿನ್ನ ಮಗು, ಮಗೂಗೆ ಹೆಸರು ಕೇಳ್ತಿದೀಯಲ್ಲ ಮಗು ಹೆಣ್ಣೋ ಗಂಡೋ'' ಅಂತ ಕೇಳಿದರು. ''ಗಂಡು ಮಗು, ಮನೇಲಿ ಮಲಗಿದ್ದಾನೆ ನಿನಗೊಂದು ಹೊಸ ಹೆಸರು ಹುಡುಕಿಕೊಂಡು ಬರ್ತೀನಿ ಅಂತ ಹೇಳಿ ಬಂದಿದ್ದೀನಿ, ಬೇಗ ಹೆಸರು ಕೊಡಿ, ಅವನು ಏಳೋ ಹೊತ್ತಿಗೆ ಮನೆಗೆ ಹೋಗಿರಬೇಕು'' ಅಂದಳು. ಆ ಮಹಿಳೆಯೇ ವಿಚಿತ್ರ ಅನಿಸಿ ಯಾವುದಾದರೂ ಒಂದು ಹೆಸರು ಹೇಳೋಣ ಅಂದುಕೊಂಡು ''ತಿರುಪತಿ ವೆಂಕಟರಮಣ'' ಅಂದರು. ಅವಳು ಖುಷಿಯಿಂದ ''ಓ, ತಿರುಪತಿ ವೆಂಕಟರಮಣ, ತುಂಬಾ ಚೆನ್ನಾಗಿದೆ'' ಅಂದು ಅಲ್ಲಿಂದ ಹೊರಟಳು. ಅವಳು ಎಲ್ಲಿ ಹೋಗುತ್ತಾಳೆ ಅಂತ ಕುತೂಹಲದಿಂದ ನೋಡುತ್ತಿದ್ದಾಗ ಅವಳು ಇನ್ನೊಬ್ಬರ ಮುಂದೆ ನಿಂತು ಮತ್ತೆ ಅದೇ ಪ್ರಶ್ನೆ ಕೇಳಿದಳು. ಅವರೂ ಇದೇನು ಈ ಹೆಂಗಸು ಹೀಗೆ ಕೇಳುತ್ತಿದ್ದಾಳೆ ಅನಿಸಿ ''ಯಾರಮ್ಮಾ ನೀನು ಯಾಕೆ ಹೀಗೆ ಕೇಳ್ತಿದೀಯ'' ಅಂತ ಕೇಳಿದರು. ಅದಕ್ಕೆ ಆ ಹೆಂಗಸು ''ಯಾರೂ ನನ್ನ ಮಗೂಗೆ ಒಳ್ಳೇ ಹೆಸರನ್ನೇ ಕೊಡ್ತಿಲ್ಲ. ಅದಿಕ್ಕೆ ಇಲ್ಲಿ ಬಂದು ಎಲ್ಲರನ್ನೂ ಕೇಳ್ತಿದೀನಿ. ಬೇಗ ಹೇಳಿ'' ಅಂದಳು. ಯಾರೋ ಹೆಂಗಸು ಇವಳ ವಿಚಾರ ನಮಗೇಕೆ ಅಂದುಕೊಂಡು ''ಪದ್ಮನಾಭ'' ಅಂದರು. ''ಓ ಪದ್ಮನಾಭ ಈ ಹೆಸರೂ ಚೆನ್ನಾಗಿದೆ'' ಅಂದು ಮಹಿಳೆ ಸ್ವಲ್ಪ ಹೆಚ್ಚಾಗಿಯೇ ನಗುತ್ತಾ ಮೈ ಕುಣಿಸಿಕೊಂಡು ಹೋದಳು.

ಒಂದೇ ಕುಟುಂಬದ ಐದಾರು ಜನ ಮಹಿಳೆಯರು ಒಂದು ಕಟ್ಟೆಯ ಮೇಲೆ ಕೂತಿದ್ದರು. ಈ ಹೆಂಗಸು ಅಲ್ಲಿಗೆ ಹೋಗಿ ಅವರಲ್ಲಿ ಸ್ವಲ್ಪ ಹಿರಿಯಜ್ಜಿಯಂತಿದ್ದ ಮಹಿಳೆ ಮುಂದೆ ನಿಂತು ''ನನ್ನ ಮಗೂಗೆ ಒಂದು ಒಳ್ಳೇ ಹೆಸರು ಕೊಡಿ'' ಅಂತ ಕೇಳಿದಳು. ಆಕೆಗೂ ಆಶ್ಚರ್ಯವಾದದ್ದರಲ್ಲಿ ಸಂಶಯವಿಲ್ಲ. ಮೊದಲಿಗೆ ಆಕೆ ಈ ಹೆಂಗಸನ್ನೂ ಅವಳ

ಪ್ರಶ್ನೆಯನ್ನೂ ಗಂಭೀರವಾಗಿ ತಗೊಳ್ಳಿಲ್ಲ. ಆದರೆ ಆ ಹೆಂಗಸು ಪದೇ ಪದೇ ಅದೇ ಪ್ರಶ್ನೆಯನ್ನು ಕೇಳಿದ್ದರಿಂದ ''ಯಾರಮ್ಮಾ ನೀನು, ನಿಮ್ಮನೆ ಎಲ್ಲಿ, ನಿನ್ನ ಮಗು ಎಲ್ಲಿ, ಯಾಕೆ ನಿನ್ನ ಮಗೂಗೆ ಹೆಸರನ್ನು ನನ್ನತ್ರ ಕೇಳ್ತಿದೀಯ'' ಅಂದು ಪ್ರೀತಿಯಿಂದ ವಿಚಾರಿಸಿದರು. ಅದಕ್ಕೆ ಆ ಹೆಂಗಸು, ''ನಾನು ಯಾರನ್ನು ಕೇಳಿದರೂ ಯಾರೂ ನನ್ನ ಮಗೂಗೆ ಒಂದು ಸರಿಯಾದ ಹೆಸರು ಹೇಳ್ತಿಲ್ಲ. ಅದಕ್ಕೇನು ಅವಸರ ಅಂತಾರೆ, ಆಮೇಲೆ ಹೇಳಿದ್ರಾಯ್ತು ಅಂತಾರೆ. ನೋಡಿ ಮಗೂಗೆ ಒಂದು ಹೆಸರೇ ಇಲ್ಲದಿದ್ದರೆ ಅದನ್ನು ಏನಂತ ಕರೆಯೋದು. ಅದಕ್ಕೆ ಪ್ಲೀಸ್ ನೀವು ಹೇಳಿ ಒಂದು ಒಳ್ಳೆ ಹೆಸರು'' ಅಂದಳು. ಅವಳ ಮಾತು ಹೇಗಿತ್ತು ಎಂದರೆ ಸಣ್ಣ ಮಗುವೊಂದು ತನಗೆ ಬೇಕಾದ ವಸ್ತುಗೆ ತಾಯಿಯನ್ನು ಪೀಡಿಸುವಂತಿತ್ತು. ಹೆಂಗಸರ ಗುಂಪಿನವರಿಗೆಲ್ಲಾ ಇದೇನು ಈ ಹೆಂಗಸು ಹೀಗಾಡ್ತಿದಾಳೆ ಅನಿಸಿತು. ಅವರಲ್ಲೊಬ್ಬಳು, ''ಅಜ್ಜಿ ಯಾವುದಾದರೂ ಒಂದು ಹೆಸರು ಹೇಳಿ ತೊಲಗಿಸು ಅತ್ಲಾಗೆ, ನಾವು ಬಸ್ ಬರೋ ಹೊತ್ತಿಗೆ ಚಪಾತಿ ತಿಂದು ಕಾಫಿ ಕುಡಿದಿರಬೇಕು. ಇಲ್ಲದಿದ್ದರೆ ಹೊತ್ತಾಗುತ್ತೆ'' ಅಂದಳು. ಅದಕ್ಕೆ ಆ ಹಿರಿಯಜ್ಜಿ ''ಇರೇ ಚಪಾತಿ ತಿನ್ನೋದು ಕಾಫಿ ಕುಡಿಯೋದು ಇದ್ದದ್ದೇ ಪಾಪ ಇವಳು ಯಾರೊ ಏನೊ ಕೇಳಿ ತಿಳ್ಕೊಳ್ಳೋಣ'' ಅಂದು ಆ ಹೆಂಗಸಿಗೆ ''ನಿನ್ನ ಹೆಸರು ಏನೂಂತ ಮೊದಲು ಹೇಳು, ಆಮೇಲೆ ನಿನ್ನ ಮಗೂನ ಕರ್ಕೊಂಡು ಬಂದು ನಮಗೆ ತೋರಿಸು. ನಿನ್ನ ಮಗೂನ ನೋಡಿ ಹೆಸರು ಹೇಳ್ತೀವಿ'' ಅಂದರು. ಈ ಮಾತು ಕೇಳಿ ಅವಳು ಪೆಚ್ಚಾದಳು. ಅಷ್ಟೊತ್ತಿಗೆ ಡಬ್ಬಿಯೊಳಗೆ ಚಪಾತಿ ಇದ್ದುದು ಕಂಡು ''ನನಗೊಂದು ಚಪಾತಿ ಕೊಡಿ, ನನಗೂ ಹಸಿವಾಗ್ತಿದೆ'' ಅಂದು ಕೈ ಒಡ್ಡಿದಳು. ಚಪಾತಿ ಕೊಟ್ಟ ತಕ್ಷಣ ಅವಳು ಅದನ್ನು ತಿಂದು ಬಾಯೊರೆಸಿಕೊಂಡು, ''ನನ್ನ ಮಗೂಗೆ ಚಪಾತಿ ಅಂತ ಹೆಸರಿಟ್ಟರೆ ಚೆನ್ನಾಗಿರುತ್ತೆ ಅಲ್ವಾ'' ಅಂದುಕೊಂಡು ಅಲ್ಲಿಂದ ಓಡಿದಳು. ಹೆಂಗಸರ ಗುಂಪಿನವರೆಲ್ಲಾ ಇದೇನು ವಿಚಿತ್ರ ಅಂದುಕೊಂಡರು.

ಕ್ಷಣ ಮಾತ್ರದಲ್ಲಿ ಆ ಹೆಂಗಸು ಒಂದು ಹೂವಿನ ಅಂಗಡಿಯ ಮುಂದೆ ನಿಂತು ಹೂವು ಕಟ್ಟುತ್ತಿದ್ದವನನ್ನು ನೋಡಿ ''ನನ್ನ ಮಗೂಗೆ ಒಂದು ಹೆಸರು ಕೊಡು'' ಅಂದಳು. ಅದಕ್ಕೆ ಅವನು ''ಮಗು ಹೆಣ್ಣೋ ಗಂಡೋ'' ಅಂತ ಕೇಳಿದ. ಅದಕ್ಕೆ ಅವಳು ''ಎರಡೂ'' ಅಂದಳು. ''ಏನು ಅವಳಿ ಜವಳೀನಾ, ಅದೂ ಒಂದು ಗಂಡು ಒಂದು ಹೆಣ್ಣು'' ಅಂದು ಹುಬ್ಬೇರಿಸಿ ತಮಾಷೆ ಮಾಡುವವನಂತೆ ''ಗಂಡು ಮಗೂಗೆ ಗುಂಡಪ್ಪ ಅಂತ ಇಡು ಹೆಣ್ಣು ಮಗೂಗೆ ಗುಂಡಮ್ಮ ಅಂತ ಇಡು'' ಅಂದ. ಅವಳ ಮುಖದಲ್ಲಿ ಕಿರುನಗೆ ಕಾಣಿಸಿತು. ''ಹೌದು ಅದೇ ಸರಿ. ನನ್ನ ಮಕ್ಕಳು ನೂರಾರು ಕಾಲ ಗುಂಡುಕಲ್ಲಿನಂತೆ ಇರಬೇಕು'' ಅಂದುಕೊಂಡು ಅಲ್ಲಿಂದ ಓಡಿದಳು.

ಇನ್ನೊಂದು ಕ್ಷಣದಲ್ಲಿ ಆ ಹೆಂಗಸು ಇಡೀ ಬಸ್ ಸ್ಟಾಂಡಿನಲ್ಲಿ ಆಕರ್ಷಣೆಯ ಕೇಂದ್ರವಾದಳು. ಅಷ್ಟೊತ್ತಿಗೆ ಅವಳು ಸುಮಾರು ಹತ್ತಾರು ಜನರ ಬಳಿ ಮಗೂಗೆ ಏನು ಹೆಸರು ಇಡಲಿ ಅಂತ ಕೇಳಿ ಉತ್ತರ ಪಡೆದುಕೊಂಡಿದ್ದಳು. ಕೆಲವರಿಗೆ ಅವಳು ತಮಾಷೆಯಾಗಿ ಕಂಡಳು, ಕೆಲವರಿಗೆ ಕುತೂಹಲ ಕೆರಳಿಸಿದಳು. ಕೀಟಲೆ ಮಾಡೋ

ಹುಡುಗರು ಅವಳನ್ನು ಮುಟ್ಟಿ ಮುಟ್ಟಿ ಮಾತಾಡಿಸುತ್ತಿದ್ದರು. ಕೆಲವರು ಅವರ ಜಡೆ ಎಳೆದರು. ಅವೆಲ್ಲ ಅವಳಿಗೆ ಲೆಕ್ಕಕ್ಕೇ ಇಲ್ಲ. ಅಲ್ಲಿ ಬಿದ್ದಿದ್ದ ಒಂದು ಪೇಪರನ್ನೂ, ಅಲ್ಲಿದ್ದವರ ಜೋಬಿನಿಂದ ಪೆನ್ನು ತೆಗೆದುಕೊಂಡು ಅದರಲ್ಲಿ ಏನೋ ಬರೆಯಲಾರಂಭಿಸಿದಳು. ಜನರು ಅವಳ ಸುತ್ತ ಮುತ್ತಿಕೊಂಡು ಅದೇನು ಬರೆಯುತ್ತಾಳೆ. ಅಂತ ಕುತೂಹಲದಿಂದ ನೋಡಿದರು. ಒಂದೇ ಕ್ಷಣದಲ್ಲಿ ಅದೆಲ್ಲಿಂದಲೋ ಒಂದು ವ್ಯಾನ್ ಬಂದು ಅವಳ ಬಳಿ ನಿಂತಿತು. ಅದರಿಂದ ಇಳಿದ ಒಬ್ಬ ''ಇಲ್ಲೇ ಇದಾಳಲ್ರೋ'' ಅಂದು ಅವಳನ್ನು ಅನಾಮತ್ತಾಗಿ ವ್ಯಾನಿಗೆ ತುಂಬಿಕೊಂಡರು. ಇದನ್ನೆಲ್ಲಾ ನೋಡುತ್ತಿದ್ದ ಆ ಹಿರಿಯಜ್ಜಿಗೆ ಕುತೂಹಲ ತಾಳಲಾರದೇ ಕೈಯಲ್ಲಿ ಚಪಾತಿ ಇರುವಂತೆಯೇ ವ್ಯಾನಿನ ಬಳಿ ಓಡೋಡಿ ಬಂದು, ''ಏನಪ್ಪಾ ಯಾರು ಆ ಹೆಂಗಸು, ಯಾಕೆ ನೀವು ಅವಳನ್ನು ಎಳ್ಕೊಂಡು ಹೋಗ್ತಿದೀರ'' ಅಂತ ಕೇಳಿದರು. ಅದಕ್ಕೆ ವ್ಯಾನಿನವನು, ''ಇವಳು ನಮ್ಮ ಮಾನಸ ಆಸ್ಪತ್ರೆ ರೋಗಿ. ಮದುವೆಯಾಗಿ ಸುಮಾರು ವರ್ಷಗಳಾದರೂ ಮಕ್ಕಳಾಗದೇ ಇರೋದ್ರಿಂದ ಅದನ್ನೇ ಮನಸ್ಸಿಗೆ ಹಚ್ಚಿಕೊಂಡು ಒಂದು ರೀತಿ ಮಾನಸಿಕ ರೋಗಿಯಾಗಿದ್ದಾರೆ. ಅದಕ್ಕೆ ನಮ್ಮಾಸ್ಪತ್ರೇಲಿ ಕೌನ್ಸಿಲಿಂಗ್ ನಡೀತಾ ಇದೆ. ಇವತ್ತು ಬೆಳಗ್ಗೆ ಇದ್ದಕ್ಕಿದ್ದಂತೆ ಕಾಣೆಯಾದರು. ನಾವು ಎಲ್ಲೆಡೆ ಹುಡುಕಿಕೊಂಡು ಬಂದೆವು. ಸಧ್ಯ ಇಲ್ಲಿ ಸಿಕ್ಕಿದ್ಲಲ್ಲ. ಅದಕ್ಕೆ ವಾಪಸ್ ಕರ್‍ಕೊಂಡು ಹೋಗ್ತಿದೀವಿ'' ಅಂದ. ವ್ಯಾನ್ ಹೊರಟಿತು. ಇದ್ಯಾವುದರ ಪರಿವೆಯೂ ಇಲ್ಲದ ಅವಳು ವ್ಯಾನಿನಲ್ಲಿ ಕಿಟಕಿಯ ಬಳಿ ಆಸನದಲ್ಲಿ ಕುಳಿತು ಹೊರಗೆ ನೋಡುತ್ತಿದ್ದಳು. ಅವಳ ಕಣ್ಣಿಗೆ ಹಿರಿಯಜ್ಜಿ ಕಾಣಿಸಿದಾಗ ಕೈ ಬೀಸಿ, ''ಆದಷ್ಟು ಬೇಗ ನನ್ನ ಮಗೂನ ಕರ್‍ಕೊಂಡು ಬರ್‍ತೀನಿ ಆಗಲಾದರೂ ನನ್ನ ಮಗೂಗೆ ಒಂದು ಒಳ್ಳೇ ಹೆಸರು ಹೇಳ್ತೀರಲ್ವಾ'' ಅಂತ ಕೇಳಿದಳು. ಹಿರಿಯಜ್ಜಿ ಏನು ಹೇಳಿದರೋ ಅವಳಿಗೆ ಗೊತ್ತಾಗಲಿಲ್ಲ. ವ್ಯಾನು ಶಬ್ದ ಮಾಡಿಕೊಂಡು ಹೊರಟೇಹೋಯಿತು. ಅದನ್ನೇ ನೋಡುತ್ತಿದ್ದ ಹಿರಿಯಜ್ಜಿಯ ಕಣ್ಣಲ್ಲಿ ನೀರು ತುಂಬಿಕೊಂಡಿತ್ತು.

✷

---

ಬೇಕು ಮಗುವಿಗೊಂದು ಮುದ್ದಾದ ಹೆಸರು
ಬೆಳಗಬೇಕು ಇರುವವರೆಗೂ ಅದರ ಉಸಿರು
ಉಸಿರು ಹೋದರೂ ಮಗುವಿನ ಹೆಸರು
ಉಳಿಯಬೇಕೆನ್ನುವವರು ಎಲ್ಲರೂ
ಇಲ್ಲದಂತೆ ಪಾಕೆಂಬ ಸಿಹಿಯಲ್ಲಿ ಮೈಸೂರು
ಆಗುವುದು ಕಡೆಗೆ
ಒಂದು ವ್ಯಕ್ತಿತ್ವ ಬೇರೊಂದು ಹೆಸರು

# ವಿಶ್ವಾಸ

**- ಕುಮುದಾ ಪುರುಷೋತ್ತಮ್**

**ಬೆ**ಳಗ್ಗೆ ಹತ್ತೂವರೆ ಗಂಟೆ. ಗಾಳಿ ಆಂಜನೇಯನ ಗುಡಿಯ ಮುಂದಿನ ರಸ್ತೆ ದಾಟಲು ರಂಗಜ್ಜಿ ಮೊಮ್ಮಗ ರಾಗಣ್ಣಿಯ ಕೈಹಿಡಿದು ನಿಂತಿದ್ದರು. ವೇಗವಾಗಿ ಎರಡೂ ದಿಕ್ಕಿನಿಂದ ಬರುತ್ತಿದ್ದ ವಾಹನಗಳು, ಅವುಗಳೆಬ್ಬಿಸುತ್ತಿದ್ದ ಧೂಳು, ಡೀಸೆಲಿನ ಹೊಗೆ, ಕಿವಿಕಿವುಡಾಗಿಸುತ್ತಿದ್ದ ಅವುಗಳ ಹಾರನ್ ಶಬ್ದಸಮರದಿಂದಾಗಿ ರಂಗಜ್ಜಿ ಸಂಪೂರ್ಣ ಕಂಗೆಟ್ಟರು. ರಾಗಣ್ಣಿಯ ಹಿಡಿತದಿಂದ ಕೈ ಒದರಿಕೊಂಡರು.

''ಈಪಾಟಿ ಗಲಾಟೇಲಿ ರಸ್ತೆ ದಾಟೋಕ್ಕೆ ನನ್ಕೈಲಿ ಆಗೋದಿಲ್ಲಾಪ್ಪ. ಆಂಜನೇಯನಿಗೆ ಇಲ್ಲಿಂದ್ಲೇ ದೊಡ್ಡ ನಮಸ್ಕಾರ. ಪಾಪ ಆ ರಾಮಭಂಟ ಸತತವಾಗಿ ಈ ಮಾಲಿನ್ಯವನ್ನು ಅದ್ಹೇಗೆ ತಡ್ಕೊತಾನೋ?'' ನಿಂತಲ್ಲಿಂದ್ಲೇ ಕೈ ಮುಗಿದರು.

''ನಿಂಜೊತೆ ನಾನಿಲ್ವಾ? ನಾ ಕೈಹಿಡ್ದು ರಸ್ತೆ ದಾಟಿಸ್ತೀನಿ. ಬರೀ ನಮಸ್ಕಾರ ಯಾಕೆ? ತೀರ್ಥಪ್ರಸಾದ, ವಡೆಮಾಲೆ ಪ್ರಸಾದಾನೂ ಕೊಡಸ್ತೀನಿ ಬಾ'' ಎಂದು ಮತ್ತೆ ಕೈ ಹಿಡಿದ.

ಹಳ್ಳಿಯಿಂದ ಮೊದಲಬಾರಿ ನಗರಕ್ಕೆ ಬಂದಿದ್ದ ಈ ಅಜ್ಜಿಯಮೇಲೆ ರಾಗಣ್ಣಿಗೆ ಬಲು ಅಕ್ಕರೆ. ಕೈಹಿಡಿದು ಕೆಂಪು ದೀಪ ನಿಲ್ಲಿಸಿದ್ದ ವಾಹನಗಳ ನಡುವೆ ತೂರಿ ಅರ್ಧ ರಸ್ತೆ ದಾಟಿದ್ದರಷ್ಟೆ. ಅಜ್ಜಿಯ ಕಣ್ಣಿಗೆ ತಮ್ಮಂತೆಯೇ ಎದುರುಗಡೆಯಿಂದ ಅರ್ಧರಸ್ತೆ ದಾಟಿಬಂದಿದ್ದ ತಮ್ಮೂರ ಗೌಡರ ಮೊಮ್ಮಗ ಮುರಾರಿ ಕಣ್ಣಿಗೆ ಬಿದ್ದ! ರಂಗಜ್ಜಿಗೆ ಪರಮಾನಂದವಾಯಿತು. ರಂಗಣ್ಣಿಯ ಕೈಬಿಟ್ಟು ಮುರಾರಿಯ ಕೈ ಹಿಡಿದುಕೊಂಡುಬಿಟ್ಟರು.

''ಏನೋ ಮುರಾರಿ? ಚೆನ್ನಾಗಿದ್ದೀಯಾ? ಹಳ್ಳಿಗೆ ಬಂದು ಎಷ್ಟು ವರ್ಷವಾಯ್ತು ಏನ್ಕಥೆ? ನಿಮ್ಮಜ್ಜಿ ಪಾಪ ಹಾಸಿಗೆ ಹಿಡ್ದಿದ್ದಾಳೆ. ಬಂದು ನೊಡ್ಬಾರ್ದೇನೋ'' ದಬಾಯಿಸಿದರು.

ಈ ವೇಳೆಗೆ ಕೆಂಪುದೀಪ ಕೇಸರಿಯ ಮೇಲೆ ಕುಪ್ಪಳಿಸಿ ಹಸಿರಿಗೆ ತಿರುಗಿತ್ತು. ಮುಂದೆ ನುಗ್ಗಲು ಹಾತೊರೆಯುತ್ತಿದ್ದ ವಾಹನಗಳು ಇವರ ಸುತ್ತಾ ಗಿರಕಿ ಹೊಡೆದರೆ ಅವುಗಳ ಚಾಲಕರು ಮೂವರನ್ನೂ ಉಗಿದು ಉಪ್ಪಿನಕಾಯಿ ಹಾಕಿದರು. ಅಜ್ಜಿ ಮಾತ್ರ ತುಸುವೂ ವಿಚಲಿತರಾಗದೆ ಮುರಾರಿಯ ಬಳಿ ಮಾತುಕಥೆ ಮುಂದುವರೆಸಲು ಒಲವು ತೋರಿದರು. ಮುಜುಗರಗೊಂಡ ಮುರಾರಿ ''ನಾ ಹೊಗ್ಬೇಕು ಅಜ್ಜಿ. ಮನೆಗೆ ಬನ್ನಿ ಮಾತ್ನಾಡೋಣ'' ಬಿಡುಗಡೆಗೊಂಡು ಓಡುತ್ತಾ ರಸ್ತೆದಾಟಿ ಹೋದ. ವಿಷಯ ಅಲ್ಲಿಗೇ ಮುಗಿದುಬಿಟ್ಟಿದ್ದರೆ ನನಗೀಗ ಲೇಖನ ಬರೆಯುವ ಪ್ರಮೇಯವೇ ಬರುತ್ತಿರಲಿಲ್ಲ. ಆದರೆ ಆದದ್ದೇ ಬೇರೆ.

ಮರುದಿನದಿಂದಲೇ ಅಜ್ಜಿ ವರಾತ ಶುರು ಹಚ್ಚಿದರು. ''ರಾಘು, ನನ್ನನ್ನು ಮುರಾರೀ ಮನೆಗೆ ಯಾವಾಗ ಕರೆದುಕೊಂಡು ಹೋಗ್ತೀ? ಪಾಪ ನೆನ್ನೆ ಆ ಗಲಾಟೇಲೂ ಅಷ್ಟೊಂದು ವಿಶ್ವಾಸದಿಂದ ಮನೇಗೆ ಬನ್ನೀಂತ ಕರ್ದಿದ್ದಾನೆ.''

''ಅವನು ಮನೇಗೆ ಬನ್ನೀಂತ ಕರ್ದದ್ದು ವಿಶ್ವಾಸದಿಂದಲ್ಲ. ಆ ಗಲಾಟೇಲಿ ಹೇಗಾದ್ರೂ ಮಾತು ಮುಕ್ತಾಯ ಮಾಡ್ಬೇಕಿತ್ತು. ಅದಕ್ಕೇ ಹಾಗಂದ ಅಷ್ಟೇ. ಅದನ್ನೇ ಗಂಭೀರವಾಗಿ ತೊಗೋಬೇಡಿ.'' ರಾಗಣ್ಣ ಸಾರಿ ಸಾರಿ ಹೇಳಿದ್ರೂ ಅಜ್ಜೀದು ಒಂದೇ ರಾಗ.

''ಅವ್ನು ನನ್ನ ಕಣ್ಮುಂದೆ ಬೆಳೆದ ಹುಡ್ಗ. ನಾ ಮಾಡೋ ಗೊಜ್ಜವಲಕ್ಕಿ ಅಂದ್ರೆ ಪಂಚಪ್ರಾಣ. ಕೇಳ್ದಾಗ ಮಾಡಿಕೊಡದಿದ್ರೆ ಜಾಗ ಬಿಟ್ಟು ಕದಲ್ತಾ ಇರ್ಲಿಲ್ಲ.'' ಹೇಳುತ್ತಾ ಹೇಳುತ್ತಾ ಅಜ್ಜಿ ಮುರಾರಿಯ ಬಾಲ್ಯದಲ್ಲಿ ತೇಲಿಹೋದರು. ರಾಗಣ್ಣಗೆ ಅಡಿಕೆ ಕತ್ತರಿಯಲ್ಲಿ ಸಿಕ್ಕಿಕೊಂಡಂತಾಗಿತ್ತು. ಅಜ್ಜಿಗೆ ತಿಳಿಹೇಳಲು ಪ್ರಯತ್ನಿಸಿದ.

''ಮನೇಗೆ ಬನ್ನೀಂತ ಕರೆಯೋದು ಈಗಿನ ಕಾಲ್ದಲ್ಲಿ ಬರೀ ವ್ಯಾವಹಾರಿಕ ಅಷ್ಟೇ. ಕರೆದವರು, ಕರೆಸಿಕೊಂಡವರು ಇಬ್ಬರೂ ಇದನ್ನು ಗಂಭೀರವಾಗಿ ಪರಿಗಣಿಸೋದಿಲ್ಲಾ. ಈಗಿನ ನಗರವಾಸಿಗಳಿಗೆ ಕೆಲಸವಿಲ್ಲದೆ ಮತ್ತೊಬ್ಬರ ಮನೆಗೆ ಹೋಗಿ ಕುಳಿತುಕೊಳ್ಳುವುದಕ್ಕಾದರೂ ವ್ಯವಧಾನವೆಲ್ಲಿರುತ್ತೆ? ಜನರೊಡನೆ ಸಂಪರ್ಕವೇನಿದ್ದರೂ ಫೋನ್ ಮೆಸ್ಸೇಜಿಂಗ್ ಮೂಲಕವಷ್ಟೆ.'' ಅಜ್ಜಿ ಮುನಿಸಿಕೊಂಡು ಕುಳಿತುಬಿಟ್ಟರು. ''ನಿನ್ಗೆ ಕರ್ಕೊಂಡು ಹೋಗೋಕ್ಕೆ ಮನಸ್ಸಿಲ್ಲ. ಅದಕ್ಕೇ ಏನೇನೋ ನೆಪ ಹೇಳ್ತೀ'' ಎಂದು ಅಲವತ್ತುಕೊಂಡಾಗ ರಾಗಣ್ಣಗೆ ನೋಡಲಾಗಲಿಲ್ಲ.

''ಅಜ್ಜಿ, ಮುರಾರಿ ಈಗ ನೀವು ನೋಡ್ತಿದ್ದ ಆಗಿನ ಹುಡುಗ ಅಲ್ಲ. ಅವನೀಗ ದೊಡ್ಡ ಸಾಹೇಬ. ಅವನಿಗೆ ಬಿಡುವೇ ಇರೋಲ್ಲ. ಅವನನ್ನು ನೋಡಬೇಕಾದ್ರೆ ಅವನ ಕಾರ್ಯದರ್ಶಿಯಿಂದ ಅಪಾಯಿಂಟ್‌ಮೆಂಟ್ ತೊಗೋಬೇಕು.''

''ಅದಕ್ಕೇನು ಮುಟ್ಬೇಕು? ಅದೆಂಥದ್ದೋ ಹೇಳಿದ್ಯಲ್ಲಾ. ಕಾರ್ಯದರ್ಶಿ ಇಂದ ಅದನ್ನೇ ತೊಗೋ.''

ರಾಗಣ್ಣ ಒಂದು ರಾತ್ರಿ ಮುರಾರೀಗೆ ಫೋನ್ ಮಾಡಿದ. ''ಯೂ ಸೀ ರಾಘು, ಈ ಅಯ್ಯಾಮ್ ವೆರಿ ಬ್ಯುಸಿ. ನಾನು ದಿನಾ ಬೆಳಿಗ್ಗೆ ಟೆನ್ನಿಸ್ ಆಡಿ ಬಂದು ಸ್ನಾನ ಮುಗಿಸೋ ಹೊತ್ಗೆ ಎಂಟೂವರೆ ಆಗತ್ತೆ. ನನ್ನ ಹೆಂಡ್ತಿ ಜಿಮ್‌ನಿಂದ ಬರೋದ್ರಲ್ಲಿ ಒಂಬತ್ತೇ ಆಗ್ಬಿಡತ್ತೆ. ನಾನು ಒಂಬತ್ತೂವರೆಗೆ ಆಫೀಸಿಗೆ ಹೋಗ್ಬೇಕು. ಒಂಬತ್ತಿಂದ ಒಂಬತ್ತೂವರೆ ವರ್ಗೂ ಫ್ರೀಯಾಗಿರ್ತೀನಿ. ಆಗ ಅಜ್ಜೀನ ಕರ್ಕೊಂಡ್ಬಾ'' ಎಂದು ಅಪಾಯಿಂಟ್ಮೆಂಟ್ ಕೊಟ್ಟ.

ಮರು ದಿನ ಒಂಬತ್ತು ಗಂಟೆಗೆ ಐದು ನಿಮಿಷವಿದ್ದಾಗ ರಾಗಣ್ಣ ಗೊಜ್ಜವಲಕ್ಕಿ ಡಬ್ಬ ಹಿಡಿದ ರಂಗಜ್ಜಿಯೊಡನೆ ಮುರಾರಿಯ ಮನೆ ಪ್ರವೇಶಿಸಿದ. ಬಾಗಿಲು ಕಾಯುತ್ತಿದ್ದವ ಅವರ ಹೆಸರು, ಉದ್ಯೋಗ, ಬಂದಿರುವ ಕಾರಣ ಎಲ್ಲಾ ದಾಖಲು ಮಾಡಿಕೊಂಡು ಒಳಹೋದ. ಮತ್ತೆ ಹೊರಬಂದವನು ಇಬ್ಬರನ್ನೂ ಸುಸಜ್ಜಿತ ದಿವಾನ್‌ಖಾನೆಯೊಳಗೆ ಬಿಟ್ಟ.

ಬೇರೇ ಕೆಲಸವಿದ್ದ ತಾನು ಅರ್ಧಗಂಟೆಯೊಳಗೆ ಬರುವುದಾಗಿ ಹೇಳಿ ರಾಗಣ್ಣ ಅಜ್ಜಿಯನ್ನು ಬಿಟ್ಟು ಹೊರಟ.

ಠಾಕೋಠೀಕಾಗಿ ಒಂಬತ್ತಕ್ಕೆ ಮುರಾರಿ ಹಾಗೂ ಅವನ ಹೆಂಡತಿ ಬಂದು ಅಜ್ಜಿಯನ್ನು ಸ್ವಾಗತಿಸಿದರು. ಅಜ್ಜಿ ಡಬ್ಬಿಯನ್ನು ಅವನ ಕೈಗಿತ್ತರು.

''ನಿನಗಾಗಿ ಗೊಜ್ಜವಲಕ್ಕಿ ಮಾಡಿ ತಂದಿದ್ದೀನಿ. ಹುಡುಗನಾಗಿದ್ದಾಗ ಇದಕ್ಕಾಗಿ ನನ್ನನ್ನೆಷ್ಟು ಪೀಡಸ್ತಿದ್ದೆ ಗೊತ್ತಾ?''

ಮುರಾರಿ ಒಂದು ವಿಧವಾಗಿ ನಕ್ಕ. ''ಗೊಜ್ಜವಲಕ್ಕಿನಾ? ನಾನೀಗ ಹುಳಿ ಪದಾರ್ಥ ತಿನ್ನೋಲ್ಲ. ಹೊಟ್ಟೇಲಿ ಆಸಿಡಿಟಿ ಆಗಿದೆ. ಖಾರ, ಹುಳಿಪದಾರ್ಥ ತಿನ್ಬೇಡ ಅಂದಿದ್ದಾರೆ ಡಾಕ್ಟರು.''

''ಅದ್ಯಾವ ಮನೆಹಾಳ ಡಾಕ್ಟರೋ ಹಾಗಂದದ್ದು? ಊಟದಲ್ಲಿ ಉಪ್ಪು ಹುಳಿ ಖಾರ ಇಲ್ದಿದ್ರೆ ಮೈಯಾತಕ್ಕಾದೀತು? ಬರೀ ಸಪ್ಪೆ ಊಟ ಮಾಡ್ತಾ ಇದ್ರೆ ಬಲಹೀನನಾಗ್ಬಿಡ್ತಿ. ನಾ ಹೇಳ್ತೀನಿ ಕೇಳು. ಇವತ್ತು ಈ ಗೊಜ್ಜವಲಕ್ಕಿ ತಿನ್ನು. ಅದ್ಯಾವ ಖಾಯ್ಲೆ ಬರುತ್ತೋ ನಾನೂ ನೋಡೇ ಬಿಡ್ತೀನಿ'' ಸವಾಲೆಸೆದರು ತೊಡೆ ತಟ್ಟುತ್ತಾ.

ಅಡುಗೆಯವ ದೊಡ್ಡ ಪಿಂಗಾಣಿ ತಟ್ಟೆಯಲ್ಲಿ ವೃತ್ತಾಕಾರವಾಗಿ ಅಲಂಕರಿಸಿಟ್ಟಿದ್ದ ಬಿಸ್ಕತ್ತು, ಅವುಗಳ ನಡುವೆ ಇಣುಕುತ್ತಿದ್ದ ದ್ರಾಕ್ಷಿ ಗೋಡಂಬಿ ಬಾದಾಮಿಗಳು ತಂದು ಅಜ್ಜಿಯ ಮುಂದೆ ಹಿಡಿದ. ಅಜ್ಜಿ ಕಣ್ಣರಳಿಸಿದರು.

''ಇದೇನಪ್ಪಾ ಇಷ್ಟು ಬಿಸ್ಕತ್ತು ಕೊಟ್ಟಿದ್ದೀ? ಬಿಸ್ಕತ್ತು ತಿನ್ನೋಕ್ಕೆ ನಾನೇನು ಬೆಟ್ಟು ಚೀಪೋ ಪಾಪಚ್ಚೀನಾ? ಏನೋ ವಿಶ್ವಾಸದಿಂದ ಕೊಟ್ಟಿದ್ದೀ. ಬೇಡವೆನ್ನುವಂತಿಲ್ಲಾ'' ಹೇಳುತ್ತಾ ತಟ್ಟೆಯನ್ನೇ ತೆಗೆದುಕೊಂಡು ತೊಡೆಯಮೇಲೆ ಇಟ್ಟುಕೊಂಡರು.

''ಅಜ್ಜಿ, ಅಷ್ಟೂ ತಿನ್ನಬೇಕಿಲ್ಲ. ನಿಮಗೆಷ್ಟು ಬೇಕೋ ಅಷ್ಟು ತೊಗೋಳಿ.'' ಮುರಾರಿಯ ಹೆಂಡತಿ ಗಾಬರಿಯಿಂದಲೇ ಹೇಳಿದಳು. ಆದರೆ ಅಜ್ಜಿ ಪಾಲಿಸಿಕೊಂಡು ಬಂದಿದ್ದ ಆಚಾರ ಬೇರೆಯದೇ ಆಗಿತ್ತು. ಅವರಮ್ಮ ಚಿಕ್ಕಂದಿನಲ್ಲಿ ಮಕ್ಕಳು ತಟ್ಟೆಯಲ್ಲಿ ಊಟ ಬಿಟ್ಟೆದ್ದರೆ ಹೇಳಿದ್ದಿದು. ಆಹಾರ ತಟ್ಟೆಯಲ್ಲಿ ತಿನ್ನದೇ ಬಿಟ್ಟರೆ ಅನ್ನಲಕ್ಷ್ಮಿಗೆ ಅವಮಾನ ಮಾಡಿದಂತೆ. ಅದು ರಾತ್ರೆ ನಿಮ್ಮ ದಿಂಬಿನ ಬಳಿ ಕುಳಿತು ಅಳುತ್ತೆ ಎಂದಾಗ ಬೆದರಿದ ಮಕ್ಕಳು ಉಸಿರೆತ್ತದೆ ತಟ್ಟೆ ಖಾಲಿ ಮಾಡುತ್ತಿದ್ದರು. ಈ ಅಭ್ಯಾಸ ಅಜ್ಜಿಗೆ ರಕ್ತಗತವಾಗಿ ಬಂದಿತ್ತು. ಬಿಸ್ಕತ್ತಿನ ತಟ್ಟೆಯನ್ನು ಮಡಿಲಲ್ಲಿಟ್ಟುಕೊಂಡು ಒಂದೊಂದಾಗಿ ತಿನ್ನತೊಡಗಿದರು. ಒಂದಾಯ್ತು.. ಎರಡಾಯ್ತು.. ಮೂರಾಯ್ತು. ಹಾಗೆಯೇ ಏರುತ್ತಾ ತಟ್ಟೆ ಅರ್ಧ ಖಾಲಿ ಆಯ್ತು. ಮುರಾರಿ ಗಾಬರಿಯಿಂದ ತಡೆಯಲು ಎಷ್ಟೋ ಪ್ರಯತ್ನಪಟ್ಟ. ''ಅಜ್ಜಿ, ನಿಮ್ಗೆ ಹೆಚ್ಚಾದ್ರೆ ಬಿಟ್‌ಬಿಡಿ. ನಿಮ್ ಆರೋಗ್ಯಕ್ಕೆನಾದ್ರೂ ತೊಂದ್ರೆ ಆದೀತು.''

''ಅದು ನನ್ನ ನೇಮಕಣೋ. ಚಿಕ್ಕಂದಿನಿಂದ ಬಂದ ಅಭ್ಯಾಸ. ನಾನು ತಿಂದು ಮಿಕ್ಕಿದ ಎಂಜಲು ಯಾರು ಯಾಕೆ ತಿನ್ಬೇಕು? ತಿನ್ನದೆ ಎಸೆಯಲು ಮನಸ್ಸು ಒಪ್ಪೋಲ್ಲ.''

''ಅಜ್ಜಿಯ ನೇಮ ಮೊದ್ಲೇ ಗೊತ್ತಿದ್ರೆ ತಟ್ಟೇಲಿ ಅಷ್ಟೊಂದು ಬಿಸ್ಕತ್ತು ಇಡ್ತಾ ಇರ್ಲಿಲ್ಲ.'' ಮುರಾರಿಯ ಹೆಂಡತಿ ಗಂಡನ ಕಿವಿಯಲ್ಲಿ ಪಶ್ಚಾತ್ತಾಪದಿಂದ ಪಿಸುಗುಟ್ಟಿದಳು. ಆದರೇನು? ತಪ್ಪು ನಡೆದುಹೋಗಿತ್ತು. ಒಳಹೋಗಲು ಕಷ್ಟಪಡುತ್ತಿದ್ದ ಬಿಸ್ಕತ್ತು ಇತ್ಯಾದಿಗಳನ್ನು ಜ್ಯೂಸಿನಿಂದ ಒಳಹೋಗಿಸಿ ಅಜ್ಜಿ ತಟ್ಟೆ ಖಾಲಿ ಮಾಡಿದರು.

ಸುಸ್ತಾಗಿ ಮನೆ ತಲುಪಿದ ಅಜ್ಜಿ ಹೊಟ್ಟೆ ತೊಳಸುತ್ತೆಂದು ಮಲಗಿದವರು ಮೇಲೆದ್ದಿದ್ದು ಮರುಮುಂಜಾನೆಯೇ! ಈ ಬಿಸ್ಕತ್ ಔತಣದ ಪರಿಣಾಮವೋ ಏನೋ ಮುಂದಿನ ದಿನಗಳಲ್ಲಿ ಯಾರಾದರೂ ಮನೆಗೆ ಬನ್ನಿ ಎಂದು ವಿಶ್ವಾಸದಿಂದ ಕರೆದರೆ ಅಷ್ಟೇ ವಿಶ್ವಾಸದಿಂದ ಖಂಡಿತ ಬರ್ತೀನಿ ಎಂದು ಹೇಳಲು ಕಲಿತರು. ರಾಗಣ್ಣಿಯನ್ನು ಮಾತ್ರ ಕರೆದುಕೊಂಡು ಹೋಗಲು ಪೀಡಿಸಲೇ ಇಲ್ಲ!

✷

---

## ಆರ್.ಕೆ. ಲಕ್ಷ್ಮಣ್ ಸ್ವಾರಸ್ಯ

ಆರ್.ಕೆ. ಲಕ್ಷ್ಮಣ್ ಅವರ ತಾಯಿ ಟೆನ್ನಿಸ್, ಇಸ್ಪೀಟ್ ಮತ್ತು ಚೆಸ್ ಆಟಗಳಲ್ಲಿ ಪ್ರವೀಣೆ. ಅವರು ಈ ಆಟಗಳನ್ನು ಅಂದಿನ ಮೈಸೂರು ಮಹಾರಾಣಿಯವರ ಜೊತೆಗೆ ಆಡುತ್ತಿದ್ದರು ಎನ್ನುವುದು ಹೆಗ್ಗಳಿಕೆ. ವಾರಕ್ಕೆ 2 ಬಾರಿ ಇಂಥಾ ಆಟಗಳನ್ನು ಆಯೋಜಿಸುತ್ತಿದ್ದರು. ಲಕ್ಷ್ಮಣ್ ಅವರು ಹೇಳುವಂತೆ ಅವರ ತಾಯಿಯವರು ಮಹಾರಾಣಿಯವರ ಎದುರಿನಲ್ಲಿ ಬಹಳ ಕಷ್ಟಪಟ್ಟು ಸೋಲುತ್ತಿದ್ದರು ಎಂತ. (ಎಂದರೆ ಮಹಾರಾಣಿಯವರ ಎದುರಿನಲ್ಲಾಗಲೀ, ಮಹಾರಾಜರ ಎದುರಿನಲ್ಲಾಗಲೀ ಆಟಗಳಲ್ಲಿ ಗೆಲ್ಲುವುದು ಅಂಥಾ ಸಂತೋಷದ ಸಮಾಚಾರಗಳಲ್ಲ)
ಮಹಾರಾಣಿಯವರ ಜೊತೆ ಆಟಗಳಲ್ಲಿ ಭಾಗವಹಿಸಿದ ಮಹಿಳೆಯರಿಗೆ ಅಂದು ರಾತ್ರಿ ಅರಮನೆಯಲ್ಲಿ ಔತಣ ಕೂಟ ಇರುತ್ತಿತ್ತು. ಲಕ್ಷ್ಮಣ್ ಅವರು ತಮ್ಮ ತಾಯಿ ಔತಣಕೂಟ ಮುಗಿಸಿಕೊಂಡು ಬರುವುದನ್ನೇ ಕಾಯುತ್ತಿದ್ದರು. ಏಕೆಂದರೆ ಮಹಾರಾಣಿಯವರು ಎಲ್ಲರ ಮನೆಗೂ ಒಂದೊಂದು ಬುಟ್ಟಿಯಲ್ಲಿ ತಿಂಡಿಗಳನ್ನು ಕಳಿಸಿಕೊಡುತ್ತಿದ್ದರು (ಆಟದಲ್ಲಿ ತಮ್ಮ ಜೊತೆ ಸೋತಿದ್ದ ಸಂತೋಷಕ್ಕಾಗಿ) ಇಂಥಾ ದಿನಗಳಲ್ಲಿ ತಾಯಿ ಬರುವುದು ತುಸು ತಡವಾದರೆ ಲಕ್ಷ್ಮಣ್ ಅವರ ತಂದೆ ಸಿಡಿಮಿಡಿಗೊಳ್ಳುತ್ತಿದ್ದರು. ಅವರನ್ನೇ ನೋಡುತ್ತಿದ್ದ ಲಕ್ಷ್ಮಣ್ ಅವರು ಒಂದು ದಿನ ತಂದೆಯ ಕೋಪದ ನಾನಾ ಭಂಗಿಗಳನ್ನು ಹಾಳೆಯಲ್ಲಿ ಬರೆದುಬಿಟ್ಟರು. ಅದನ್ನು ನೋಡಿದ ಅವರ ತಂದೆ ನನ್ನನ್ನೇ ಗೇಲಿ ಮಾಡ್ತೀಯ ಅಂತ ಆ ಹಾಳೆಯನ್ನು ಹರಿದು ಹಾಕಲು ಬಂದರೆ ತಾಯಿ ಅದನ್ನು ಹರಿಬೇಡಿ ಅವನು ಚೆನ್ನಾಗಿ ಚಿತ್ರ ಬರೆದಿದ್ದಾನೆ ಎಂದು ಹೊಗಳಿದ್ದೇ ಅಲ್ಲದೇ ಅದನ್ನು ತಮ್ಮ ಸ್ನೇಹಿತೆಯರಿಗೆಲ್ಲಾ ತೋರಿಸಿ ನೋಡಿ ನನ್ನ ಮಗ ಎಷ್ಟು ಚೆನ್ನಾಗಿ ಚಿತ್ರ ಬರೆದಿದ್ದಾನೆ ಎಂದು ಸಂತೋಷಿಸುತ್ತಿದ್ದರು. ಇಂಥಾ ಘಟನೆಗಳು ನನ್ನ ಮುಂದಿನ ವ್ಯಂಗ್ಯಚಿತ್ರ ಬದುಕಿಗೆ ಸ್ಫೂರ್ತಿಯಾಯಿತು ಎಂದು ಲಕ್ಷ್ಮಣ್ ಅವರು ನೆನಪಿಸಿಕೊಳ್ಳುತ್ತಾರೆ.

# ನಟ ನಟಿ : ತೆರೆದಿಟ್ಟ ಸತ್ಯ

**- ಭುವನೇಶ್ವರಿ ಹೆಗಡೆ**

**ವಾ**ರ್ಷಿಕೋತ್ಸವದ ದಿನ ಹತ್ತಿರ ಬಂದಂತೆ ಕಾಲೇಜಿನ ಪ್ರತಿ ವರ್ಷದಂತೆ ಪ್ರಿನ್ಸಿಪಾಲರು, ಅಧ್ಯಾಪಕರು ಹಾಗೂ ವಿದ್ಯಾರ್ಥಿ ಮುಖಂಡರ ಸಭೆ ಕರೆದಾಯ್ತು. ಸಭಾಭವನ ಪೂರ್ತಿ ತುಂಬಿದ ಮೇಲೆ ಪ್ರಿನ್ಸಿಪಾಲರು ಮಾಮೂಲು ಆಡಳಿತಾತ್ಮಕ ಧಾಟಿಯಲ್ಲಿ.

ಪ್ರತಿವರ್ಷದಂತೆ ಈ ವರ್ಷವೂ ಕಾಲೇಜು ವಾರ್ಷಿಕೋತ್ಸವ ಆಚರಿಸಬೇಕಾಗಿದೆ. ದಿನಾಂಕ, ಖರ್ಚು ವೆಚ್ಚ ಹಾಗೂ ಅತಿಥಿಗಳ ಆಯ್ಕೆ ಇವಿಷ್ಟು ಇಂದಿನ ಸಭೆಯ ಅಜೆಂಡಾ ಎಂದು ವಿವರಿಸಿ ಎಲ್ಲರೂ ಮೊದಲು ಚಹಾ ಬಿಸ್ಕಿಟ್ ಮುಗಿಸಿ ಎಂದು ಹೇಳಿ ಕೂತರು.

ಚರ್ಚೆ ಪ್ರಾರಂಭವಾಗಿ ಹಿರಿಯ ಮೇಡಮೊಬ್ಬರು ಚಾಲನೆ ನೀಡಿದರು - ಕಾಲೇಜ್ ಡೇ ಎಂಬುದು ನಮ್ಮ ಈ ಕಾಲೇಜಿನ ಹಿರಿಮೆ, ಘನತೆಗಳನ್ನು ಎತ್ತಿ ಹಿಡಿಯುವಂತಿರಬೇಕು ಹೊರತು ಎತ್ತಿ ಬಿಸಾಡುವಂತಿರಬಾರದು... ಇದು ನನ್ನ ಕಳಕಳಿಯ ವಿನಂತಿ ಎಂದು ಹೇಳಿ ಕೂತರು. ದಿನಾಂಕ, ಖರ್ಚು... ಎಲ್ಲವನ್ನು ವಿದ್ಯಾರ್ಥಿ ಮುಖಂಡರ ಅನುಮತಿಯೊಂದಿಗೆ ನಿಗದಿಪಡಿಸಲಾಯ್ತು.

ಈಗುಳಿದಿದ್ದು ಮುಖ್ಯ ಅತಿಥಿಗಳ ಆಯ್ಕೆ. ಮೊದಲು ಅಧ್ಯಾಪಕರು ಸೂಚಿಸಿ ಎಂದರು ಪ್ರಿನ್ಸಿಪಾಲರು - ಖ್ಯಾತ ಶಿಕ್ಷಣ ತಜ್ಞ ಶರಣಯ್ಯನವರು. ಕೃಷಿ ವಿಜ್ಞಾನಿ ವೆಂಕಟೇಶಯ್ಯ... ಸಮಾಜ ಸೇವಾಸಕ್ತೆ ಪಾರ್ವತೀ ಬಾಯಿ... ನಿವೃತ್ತ ಕುಲಪತಿ ಬಾಚಯ್ಯನವರು... ಹೀಗೆ ಹೆಸರುಗಳು ಬರುತ್ತಿದ್ದಂತೆ ವಿದ್ಯಾರ್ಥಿ ಸಂಕುಲದಲ್ಲಿ ಅಪಹಾಸ್ಯ ತಿರಸ್ಕಾರದ ನಗುವಿನ ಅಲೆಗಳು ಎದ್ದವು.

ಕ್ರಾಂತಿಕಾರಿ ವಿದ್ಯಾರ್ಥಿ ಮುಖಂಡನೆಂದೇ ಪ್ರಸಿದ್ಧವಾದ ಮುಖೇಶ್ ಎದ್ದು ನಿಂತು ಮುಖವೆತ್ತಿ - ''ಕಾಲೇಜು ಡೇ ನಿಮ್ಮದೇ ನಮ್ಮದೇ ಹೇಳಿ ಬಿಡಿ ಸಾರ್...'' ಎಂದ.

ನಿಮ್ಮದೇಯಪ್ಪಾ ನಿಮ್ಮದು, ನಮ್ಮದೇನಿದ್ದರೂ ಏರ್ಪಾಡು ಮಾಡಿಕೊಡುವುದು... ಇದ್ದ ಸತ್ಯ ಪ್ರಿನ್ಸಿಪಾಲರು ಹೇಳಿದರು.

ಅಂದ ಬಳಿಕ ನಾವು ಅಪೇಕ್ಷೆ ಪಡುವ ಅತಿಥಿಗಳೇ ಆಗಬೇಕು ಅಂದ. ''ಸರಿ ಸರಿ ನಿಮ್ಮ ಆಯ್ಕೆಯ ಅತಿಥಿಗಳು ಯಾರು'' ಎಂದರು

ಬಾಡಿ ಪವರ್‌ಸ್ಟಾರ್ ವಿಲಕ್ಷಣ ಕುಮಾರ್ ಜತೆಗೆ ಅವನ ಎಲ್ಲಾ ಫಿಲ್ಮಿನಲ್ಲೂ ನಟಿಸಿರುವ ನಟಿ ವಿಚಿತ್ರಾ... ಇವರಿಬ್ಬರೂ ನಮ್ಮ ಆಯ್ಕೆ ಸಾರ್. ಬೇಕಾದ್ರೆ ಲೋಕಲ್ ಎಂ.ಎಲ್.ಎ ಹರಹರ ಅವರನ್ನು ಕರೆಸಿ ನಮಗೂ ಫಂಡು ಗಿಂಡು ಅಂತ ಹೆಲ್ಪ್ ಮಾಡಿದಾರೆ.

ಆ ವಿಚಿತ್ರಾ ಅನ್ನೋ ನಟಿ ಕನ್ನಡದವಳಲ್ಲಾ ಸರ್ ಯಾರದೋ ಸ್ವರ. ಅವಳ ಅಭಿನಯ ನಮ್ಮ ಭಾಷಾ ನಟಿಯರಾದ್ರೂ ಇರಲಿ... ಕನ್ನಡ ಅಧ್ಯಾಪಕರು ತಕರಾರೆತ್ತಿದಾಗ ವಿದ್ಯಾರ್ಥಿಗಳು ಹೋ ಹೋ ಎಂದರಚಿ ಅವರ ಸ್ವರ ಅಡಗಿಸಿದರು.

ಅಂತೂ ಕಾಲೇಜ್ ಡೇ ಸಿದ್ಧತೆಗಳಲ್ಲಿ ನಡೆದು ಚಪ್ಪರ ಮೈಕು ಸ್ಟೇಜು... ಎಲ್ಲವನ್ನೂ ವಿದ್ಯಾರ್ಥಿಗಳು ಆಸೆಯಿಂದ ನಿರ್ವಹಿಸಿ – ''ನೋಡ್ರಿ ಕ್ಲಾಸೊಂದಲ್ಲದೆ ಬೇರೆ ಯಾವುದೇ ಆದ್ರೂ ಹೇಗೆ ಒಗ್ಗಟ್ನಲ್ಲಿ ಕೆಲಸ ಮಾಡ್ತಾವೆ... ಅನಿಸಿಕೊಂಡು ಸ್ಟಾರ್ ಹೋಟೆಲ್ಲಿನಲ್ಲಿ ಅತಿಥಿಗಳಿಗೆ ವಾಸ್ತವ್ಯ ಕಲ್ಪಿಸಿ ಅವರ ಜತೆ ಓಡಾಡಲು ಎಲ್ಲಿಂದಲೋ ತೆರೆದ ಜೀಪನ್ನು ಒದಗಿಸಿಕೊಂಡರು.

ವಿಲಕ್ಷಣಕುಮಾರ್ ವಿಚಿತ್ರಾ ಅಭಿನಯದ ಹಾಡುಗಳು ಸ್ಲೈಡುಗಳನ್ನು ಹೊಂದಿಸಿ ಬೆಳಗಿನಿಂದಲೇ ಹಾಕಿ ಅಂತೂ ಸಂಜೆ ಕಾಲೇಜು ಗ್ರೌಂಡಿಗೆ ಬಂದಿಳಿದ ನಟನಟಿಯರನ್ನು ವಿದ್ಯಾರ್ಥಿ ಪಡೆ ಹುಚ್ಚೆದ್ದು ಕೂಗಿ ಕಿರುಚಿ ಕುಣಿದು ಸ್ವಾಗತಿಸಿತು. ಸ್ವಾಗತ ಗೀತೆ ಸ್ವಾಗತ ಭಾಷಣ ಯಾವುದೂ ಕೇಳಿಸಿಕೊಳ್ಳದ ಶಿಳ್ಳೆ, ವೋವ್ ಎಂಬ ನರಿ ಮೆರೆತ, ಪ್ರಿನ್ಸಿಪಾಲರ ಅಸಹಾಯಕ ಭಂಗಿ, ಡಿಸಿಪ್ಲಿನ್ ಕಮಿಟಿಯ. ಕಂಗೆಟ್ಟ ಮುಖಗಳ ನಡುವೆ ಸಭಾ ಕಾರ್ಯಕ್ರಮ ಮೊದಲಿಟ್ಟಿತು. ಪ್ರೈಜು ಮೆಡಲುಗಳನ್ನು ತಮ್ಮ ಹೀರೋ ಹೀರೋಯಿನ್‌ಗಳಿಂದ ಪಡೆದು ಫೋಟೋ ತೆಗೆ ಪೋಸು ಕೊಟ್ಟು ಧನ್ಯರಾದರು. ಚಪ್ಪಾಳೆ ತಟ್ಟಿ ಶಿಳ್ಳೆ ಹಾಕಿ ವಿದ್ಯಾರ್ಥಿ ಸಂಕುಲ ದಣಿಯಿತು ತಣಿಯಿತು.

ಹೆಸರಿಗೆ ಮಾತ್ರ ಒಂದು ಅಂಗಿ ಹಾಕಿದ ಬಟನ್ ಬಿಚ್ಚಿಯೇ ಇದ್ದು ತನ್ನ ಸಿಕ್ಸ್ ಪ್ಯಾಕ್ ಪ್ರದರ್ಶನಕ್ಕಿಟ್ಟವನಂತೆ ಕೂದಲು ಕೆದರಿ ಕೂತ ನಾಯಕ ನಟ ಭಾಷಣಕ್ಕೆ ಎದ್ದಾಗ ಮುಗಿಲು ಮುಟ್ಟಿದ ಬೊಬ್ಬೆ ಅಡಗಲು ಕೆಲ ಸಮಯವೇ ಹಿಡಿಯಿತು.

ನಮಸ್ಕಾರ ಎಂದು ಕಿರುಚಿದ ನಟ ಪ್ರತಿ ನಮಸ್ಕಾರ ಕಿರುಚಿ ಪಡೆದ. ನಿಮ್ಮೂರಿಗೆ ಬಂದಿದ್ದು ಖುಶಿ, ನಿಮ್ಮನ್ನು ನೋಡಿದ್ದು ಖುಶಿ, ನಿಮಗೆ ಪ್ರೈಜ್ ಕೊಟ್ಟಿದ್ದು ಖುಶಿ ನನ್ನ ಮುಂದಿನ ಚಿತ್ರಕ್ಕೆ 'ಖುಶಿಕಾಲ' ಅಂತ ಟೈಟಲ್ ಚೇಂಜ್ ಮಾಡೋದಿಕ್ಕೆ ಈ ವೇದಿಕೆಯಿಂದಲೇ ನಿರ್ಮಾಪಕರಿಗೆ ಕಾಲ್ ಮಾಡಿ ಹೇಳಿದ್ದೇನೆ...

ಅಷ್ಟರಲ್ಲಿ ಡೈಲಾಗೂ... ಎಂಬ ಬೇಡಿಕೆ ಪ್ರೇಕ್ಷಕರಿಂದ ಬಂತು 'ಪರೀಕ್ಷಾಕಾಲ' ಸಿನಿಮಾದಿಂದ ಡೈಲಾಗ್ ಹೇಳ್ಲಾ? ಅಂದಾಗ ಸಿಳ್ಳೆ ಚಪ್ಪಾಳೆ.

''ಕಾಲಕೆಟ್ಟೋಯ್ತು ಅಂತ ಯಾವ ಕಾಲದಿಂದ ಈ ನನ್ಮಕ್ಕಳು (ಹಾಗನ್ನುವಾಗ ಪ್ರಾಧ್ಯಾಪಕ ವರ್ಗದ ಕಡೆ ಕೈ ತೋರಿಸ್ತಾ) ಗೊಣಗ್ತಾ ಇದ್ದಾರೆ ಕಾಲ ಏನ್ರೀ ಕೆಡೋದು? ನನ್ಮಕ್ಕಳ ಕಾಲ್ ಮುರಿದು ಕೈಯಲ್ಲಿ ಕೊಟ್ರೆ ಬಾಯ್ಮುಚ್ಕೋತಾವೆ. ಚಚ್ಚಿ ಚಚ್ಚಿ ಬಿಸಾಡ್ಬೇಕು. ಪರೀಕ್ಷೆಯಂತೆ ಪರೀಕ್ಷೆ... ಯಾವಂಗ್ರೀ ಬೇಕು ಅವೆಲ್ಲ, ನಮ್ಮದೇನಿದ್ರೂ ಎಂಜಾಯ್... ಜಾಯ್...ಯ್... ಮುಗಿಲು ಮುಟ್ಟಿದ ಕೇಕೆಯೊಂದಿಗೆ ಭಾಷಣವೆಂಬ ಡೈಲಾಗ್ ಸಿಡಿತ ಮುಂದುವರಿದು ಜೈ ಕರ್ನಾಟಕ ಎಂದು ಹೇಳಿ ಕೂತ ಅಂಗಿರಹಿತ ಕಮಂಗಿನಟ.

ಮುಂದಿನ ಸರದಿ ನಟಿ ವಿಚಿತ್ರಾ, ಕೂದಲನ್ನು ಹಿಂದಕ್ಕೂ ಮುಂದಕ್ಕೂ ನೂರು ಬಾರಿ ತಳ್ಳಿ ರಿಹರ್ಸಲ್ ಮಾಡಿ ಬಸವಳಿದಂತೆ ತೋರುತ್ತಿದ್ದ ಬಾಲೆ ಎದ್ದು ನಿಂತು

ಹಾಯ್... ಐ ಯಾಮ್ ವಿಚಿತ್ರಾ... ನೀಮ್ಗೆ ನೋಡಿ ನಾನ್ಗೇ ಭಾಳಾನೇ ಖೂಶಿ... ಕೀಪ್ ಲಾಫಿಂಗ್, ಸ್ಕ್ರೀಮಿಂಗ್, ಶೌಟಿಂಗ್, ಬೀಟಿಂಗ್... ಲವ್ ಯೂ ಆಲ್ ಖಿಡ್ಡೀಸ್... ಎಂದು ಹೇಳಿ ಕೂದಲು ಹಿಂದಕ್ಕೆ ತಳ್ಳಿ ಕೂತುಬಿಟ್ಟಳು. ಖರ್ಚು ಇನ್ ಚಾರ್ಜ ಪ್ರೊಫೆಸರರು ಪ್ರಿನ್ಸಿಪಾಲರ ಬಳಿ ಬಗ್ಗಿ 'ಐದು ವಾಕ್ಯ ಹೇಳಲಿಲ್ಲ ಐವತ್ತು ಸಾವಿರ ಕಕ್ಕಿಸಿದಾಳಲ್ರೀ... ಎಂದರು 'ಕಾಲ ಕೆಟ್ಟೋಯ್ತುಕಣ್ರೀ' ಎನ್ನ ಹೊರಟ ಪ್ರಾಂಶುಪಾಲರು ಡೈಲಾಗ್ ನೆನಪಾಗಿ ಸುಮ್ಮನಾದರು.

ಕಾರ್ಯಕ್ರಮ ಮುಗಿದು ನಟ ನಟಿಯರನ್ನು ಪತ್ರಿಕಾ ವರದಿಗಾರರು ಸುತ್ತುವರಿದಾಗ ಇಬ್ಬರೂ ನಟನಾಚಾತುರ್ಯವನ್ನೆಲ್ಲ ಹೊರತೆಗೆಯಬೇಕಾಯ್ತು ಪ್ರಶ್ನೆ ''ನಿಮ್ಮ ಪರೀಕ್ಷಾ ಕಾಲ'' ಸಿನಿಮಾದಲ್ಲಿ ವಿದ್ಯಾರ್ಥಿ ನಾಯಕನಾಗಿ ನೀವು ಪ್ರಾಂಶುಪಾಲರನ್ನು ಚಚ್ಚುವ ಅಭಿನಯ ಮಾಡಿದ್ರಿ ತಪ್ಪು ಸಂದೇಶ ಯುವಕರಿಗೆ ನೀಡಿದಂತಾಗಲಿಲ್ಲವೆ?

ಉತ್ತರ : ನೋನೋ... ಅಂಗಿ ಬಿಚ್ಚುವದು, ಕೆರಳಿ ಚಚ್ಚುವುದು, ಮಚ್ಚಲ್ಲಿ ಕೊಚ್ಚುವುದು... ಇವೆಲ್ಲ ಇದ್ರೆ ಮಾತ್ರ ಈಗ ಜನ ಮೆಚ್ಚುವುದು.

ಪ್ರಶ್ನೆ : ನೀವೇಕೆ ಅಂಗಿ ಬಿಚ್ಚಿಯೇ ಅಭಿನಯಿಸೋದು ಹಾಗೂ ಹಾಗೇ ಇರೋದು

ಉತ್ತರ : ಬುದ್ಧಿಬಲಕ್ಕಿಂತ ದೇಹಬಲವೇ ಇವತ್ತಿನ ಜನಕ್ಕೆ ಹೆಚ್ಚು ಇಷ್ಟ. ಅಲ್ಲದೇ ದೇಹ ಬೆಳೆಸೋದು ಬುದ್ಧಿ ಬೆಳೆಸೋದಕ್ಕಿಂತ ಸುಲಭ

ಪ್ರಶ್ನೆ : ಕಾಲೇಜು ಯುವಕರಿಗೆ ನಿಮ್ಮ ಸಂದೇಶವೇನು?

ನಟ : ಡೋಂಟ್ ವರಿ, ಬಿ, ಹ್ಯಾಪಿ. ಪರೀಕ್ಷೆ ಪಾಸು ಫೇಲು ಇವೆಲ್ಲ ಇದ್ದದ್ದೇ... ಜಸ್ಟ್ ಎಂಜಾಯ್ ಮಾಡಿ...

ನಟಿ ವಿಚಿತ್ರಾ, ವೇದಿಕೆ ಏರಿದ ಕ್ಷಣದಿಂದಲೂ ಪ್ರಿನ್ಸಿಪಾಲರಿಗೆ ಆಡಲಾರದ ಅನುಭವಿಸಲಾರದ ಸಂಕಟವೊಂದು ಶುರುವಾಗಿತ್ತು. ಕಾರಣ ಆ ನಟೀಮಣಿಯ ಮೈ ಮೇಲೆ ಇದ್ದೂ ಇರದಂತಿದ್ದ ಟಾಪು. ಅದಕ್ಕೆ ತೋಳುಗಳಾಗಲೀ, ಬಟನ್ ಆಗಲೀ ಇರಲಿಲ್ಲ. ಎಷ್ಟು ಹೊತ್ತಿಗೆ ಬೇಕಾದರೂ ಅದು ಜಾರಿ ಕೆಳಗೆ ಬೀಳಬಹುದು ಎಂದೇ ತೋರುತ್ತಿತ್ತು.

–ಅಯ್ಯೋ ಆಯಮ್ಮನ ಹತ್ರ ಹೆಚ್ಚು ಪ್ರಶ್ನೆ ಬ್ಯಾಡ್ರೀ ಒಮ್ಮೆ ಅವಳು ನಮ್ಮ ಕ್ಯಾಂಪಸ್ಸಿನಿಂದ ಹೊರಹೋಗಲಿ... ಎಂದು ಗುಟ್ಟಾಗಿ ಪತ್ರಕರ್ತರ ಬಳಿ ಗೋಗರೆದರು.

ಚಟಪಟ ಪ್ರಶ್ನೋತ್ತರಗಳು ನಡೆದವು

ನಿಮಗೆ ಕನ್ನಡ ಸಿನಿಮಾ ಹೇಗನ್ನಿಸುತ್ತೆ?

ಆ್ಯಕ್ಚುವಲೀ... ನಮ್ಮ ತಾಯಿ ಕನ್ನಡದವರು, ತಂದೆ ಹಿಂದಿ, ತಾಯಿಕಡೆ ಭಾಷೇನೇ ಇಷ್ಟ ನಂಗೆ.

ನಿಮ್ಮ ಉಡುಗೆ ತೊಡುಗೆಗೆ ಪ್ರೇರಣೆ ಯಾರು?...

ಗಾಂಧೀಜಿ :

''ನಿಮ್ಮ ಮುಂದಿನ ಸಿನಿಮಾ ಯಾವುದು?''

ಆ್ಯಕ್ಚುವಲೀ...ಹಹ... ಐ ಡೋಂಟ್ ನೋ (ಅವರರ್ಥ ಯಾವ್ದೂ ಇಲ್ಲ ಅಂತ)

ಪ್ರಿನ್ಸಿಪಾಲರ ಕಂಗಾಲು ಮುಖ ಮುದ್ರೆಯಿಂದಾಗಿ ಅವಳ ಮೇಲೆ ಪ್ರಶ್ನಾ ಪ್ರಹಾರವನ್ನು ಮೊಟಕುಗೊಳಿಸಲಾಯ್ತು.

ಅಂತೂ ತೆರೆದ ಜೀಪಿನಲ್ಲಿ ತೆರೆದೆದೆಯ ನಟನಟಿಯರಿಬ್ಬರನ್ನೂ ಹತ್ತಿಸಿ ವಿದ್ಯಾರ್ಥಿ ಸಂಕುಲ ಸಂತೃಪ್ತವಾಯ್ತು. ಪ್ರಾಧ್ಯಾಪಕವರ್ಗ ನಿಟ್ಟುಸಿರಿಟ್ಟಿತು. ''ಕಾಲೇಜು ಮಕ್ಕಳ ಮನೋರಂಜನೆ'' ಮೊದಲಿಟ್ಟಿತು. ಮುಂದಿನದನ್ನು ಹೇಳುವ ಅವಶ್ಯಕತೆ ಇಲ್ಲ.





**ಕೊರವಂಜಿ ಅಪರಂಜಿ ಟ್ರಸ್ಟ್‌ನ ಟ್ರಸ್ಟೀ ಸಿ.ಆರ್. ಸತ್ಯ ಅವರ ಅಳಿವಿಲ್ಲದ ಸ್ಥಾವರ ಗ್ರಂಥಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ ಬಂದಿದೆ. ಅವರ ಈ ಸಂತೋಷದ ಸಂಭ್ರಮದಲ್ಲಿ ಅಪರಂಜಿಯ ಬಳಗದ ಎಲ್ಲರೂ ಅಭಿನಂದನೆಗಳನ್ನು ಸಲ್ಲಿಸುತ್ತಾರೆ.**

# ಅಪರಂಜಿಗೆ ಹಾರ್ದಿಕ ಶುಭಾಶಯಗಳು

## ಡಾ. ಎಚ್.ಎಸ್. ಮುರಳಿ

ನೇತ್ರ ವೈದ್ಯರು

**ದಿ ಐ ಕ್ಲಿನಿಕ್**

ಅಣ್ಣಯ್ಯ ಕಾಂಪ್ಲೆಕ್ಸ್

ಹೊಸಳ್ಳಿ ರಸ್ತೆ, ಮಂಡ್ಯ

ಫೋನ್: 224834

ಸಮಯ: ಬೆಳಗ್ಗೆ 9 ರಿಂದ 1 ಗಂಟೆ

**ಮಾಲಸ ಐ ಕ್ಲಿನಿಕ್**

ಬಸ್ ಸ್ಟಾಂಡ್ ಸರ್ಕಲ್

ಚಾಮುಂಡೀಪುರಂ

ಮೈಸೂರು 570 004

ಫೋನ್: 2332225

ಸಮಯ: ಸಂಜೆ 5 ರಿಂದ 8 ಗಂಟೆ

ಮೊಬೈಲ್: 94487 40093

# ಬ್ಯಲ್ಲ

**- ಸೂರಿ ಹಾರ್ದಳ್ಳಿ**

'**ಒಂ**ದಾನೊಂದು ಕಾಲದಲ್ಲಿ' ಎಂದು ಶುರು ಮಾಡುವುದೇ ಸರಿಯೇನೋ. ಆಗ ಇಂದಿನ ಹಾಗೆ ಪ್ಲಾಸ್ಟಿಕ್ ಕಾಗದಗಳಲ್ಲಿ ಮುಚ್ಚಲ್ಪಟ್ಟ ಚಾಕಲೇಟುಗಳು ಇರಲಿಲ್ಲ, ಬದಲಿಗೆ 'ಪ್ಯಾಟೆ'ಯ ಅಂಗಡಿಯ ಗಾಜಿನ ಭರಣಿಗಳಲ್ಲಿ ಪೆಪ್ಪರ್ ಮಿಠಾಯಿಗಳು 'ಶೋಭಾಯಮಾನ'ವಾಗಿದ್ದವು, ಅದೂ ಕಿತ್ತಳೆ ತೊಳೆಯ ಆಕಾರದಲ್ಲಿ. ಬಣ್ಣ ಕೆಂಪು, ಕೆಂಪು. 'ಇನ್ನೂ ಮಗು' ಎಂದು ಹಿರಿಯರು ನಿರ್ಧರಿಸಿರುವ ಗುಂಪಿನಲ್ಲಿ ನಾನಿದ್ದೆ. ಅಂಗಡಿಯಲ್ಲಿ, ಎದುರೆದುರೇ, ನಮ್ಮ ಕಣ್ಣಿಗೆ ಕಾಣಿಸುವಂತೆ ಗಾಜಿನ ಬಗೆಯಲ್ಲಿರುವ ಆ ಪೆಪ್ಪರ್‌ಮಿಂಟ್‌ಗಳನ್ನು ಕಂಡರೆ ನನ್ನ ಬಾಯಲ್ಲಿ ನೀರು, ನೀರು.

'ಅಪ್ಪಯ್ಯ, ಪೆಪ್ಪರ್ ಮಿಟಾಯಿ ಕೊಡ್ಸಿ,' ಎಂದು ತಂದೆಯನ್ನು ಕೇಳಿದರೆ ಬರುವ ಉತ್ತರ ಹೀಗಿತ್ತು. ಅದನ್ನ. ಅದು ಕೆಂಪು ಇಲ್ಲಯಾ, ಅದನ್ನ ಹಂದಿ ರಕ್ತ ಹಾಕಿ ಮಾಡಿದ್ದು, ಬ್ರಾಮ್ಮಣರು ತಿಂಬುಕಾಗ ಮಗ, ಎಂದು ಹೇಳುತ್ತಿದ್ದರು. ತಂದೆ ಹೇಳಿದ ಮೇಲೆ ಅದೇ ವೇದವಾಕ್ಯ, ಬೈಬಲ್ಲು. ಹಾಗಾಗಿ ಪೂರ್ತಿ ಸಸ್ಯಾಹಾರಿಗಳಾದ ನಾವು ಅದನ್ನು ತಿನ್ನುವಂತಿಲ್ಲ. ಕೋಳಿ, ಹಂದಿ, ಮೀನುಗಳನ್ನು ತಿನ್ನುವ 'ಸೂದ್ರ'ರಿಗೇ ಸರಿ ಅದು! ಅವರಿಗೆ ಸರಿಯಾಗಿ ಬ್ರಾಮ್ಮಣರು ಎನ್ನೋಕೂ ಬರೋಲ್ಲ, ಬಿರಾಮ್ರು ಎನ್ನುತ್ತಾರೆ.

ಅದನ್ನು ಬಿಟ್ಟರೆ ಅಂಗಡಿಗಳಲ್ಲಿ ಗಿರಾಕಿಗಳ, ಅದರಲ್ಲಿಯೂ ಮಕ್ಕಳ ಗಮನ ಸೆಳೆಯುವ ಇನ್ನೊಂದು ಆಕರ್ಷಕ ತಿನ್ನುವ ವಸ್ತು ಎಂದರೆ ಬಿಸ್‌ಕೆಟ್. ಮತ್ತೆ ನನ್ನ ರಾಗ, 'ಅಪ್ಪಯ್ಯ, ಬಿಸ್ಕತ್..'

ಅಪ್ಪಯ್ಯನ ಹತ್ತಿರ ಉತ್ತರ ಸಿದ್ಧವಾಗಿರುತ್ತಿತ್ತು. 'ಅದರ ಮೇಲೆ ಊದಕಂಡ ಹಾಗೆ ಇತ್ತಲೆ, ಅದು ಕೋಳಿ ಮೊಟ್ಟೆ, ಮೊಟ್ಟೆ ಬ್ರಾಮ್ಮಣರು ತಿಂಬುಕಾಗ.'

ಆ ಬಿಸ್ಕತ್ತಿನ ಮೇಲೆ ಕಂಪನಿಯ ಹೆಸರುಗಳು ಇರುತ್ತಿದ್ದವು. ಅವು ಇಂಗ್ಲಿಷಿನಲ್ಲಿ ಇರುತ್ತಿದ್ದವು, ಮತ್ತು ನಮಗೆ ಇಂಗ್ಲಿಷ್ ಎಂದರೇನು ಎಂಬುದಿರಲಿ, ಹಾಗೊಂದು ಭಾಷೆ ಇದೆ ಎಂಬುದೇ ಗೊತ್ತಿರಲಿಲ್ಲ. ನನಗೆ ಗೊತ್ತಿರುವುದು ಕನ್ನಡ ಮತ್ತು ತುಸು ಸಂಸ್ಕೃತ. ಈ ವಿಶ್ವದಲ್ಲಿ ಇದಲ್ಲದೇ ಬೇರೆ ಭಾಷೆಯಲ್ಲಿ ಮಾತನಾಡುವವರೂ ಇದ್ದಾರೆಂಬುದೇ ನನ್ನ ತಲೆಯಲ್ಲಿ ಇಲ್ಲ.

ಹೀಗೆ ಅಪ್ಪಯ್ಯ ತಾವು ಬ್ರಾಹ್ಮಣರು ಎಂಬ ಕಾರಣ ಹೇಳಿ ಅದನ್ನು ಕೊಡಿಸಲಿಲ್ಲ. ನನಗೆ ಅವರ ಕೈಯಲ್ಲಿ ಹಣವಿಲ್ಲ ಎಂಬುದು ನನಗೆ ತಿಳಿಯುತ್ತಿರಲಿಲ್ಲ, ಹಾಗಾಗಿ ಬಾಯಿ ಸಿಹಿ ಮಾಡಲು ನಮಗೆ ಸಿಗುತ್ತಿದ್ದುದು, ಬ್ಯಲ್ಲ, ಅರ್ಥಾತ್ ಬೆಲ್ಲ. ಮನೆಯಲ್ಲಿ ಡಬ್ಬದ ಬೆಲ್ಲ, ಆಲೆಮನೆಯಿಂದ ಬಂದಿದ್ದು, ನೀರು ನೀರು. ಬೊಗಸೆಯಲ್ಲಿ ತೆಗೆದುಕೊಂಡರೆ ಕೈ ಮೇಲೆ ಇಳಿದು ಬರುತ್ತಿತ್ತು. ನೆಕ್ಕಬೇಕು, ಚೀಪುವಂತಿಲ್ಲ. ಅದಲ್ಲದೇ ಅದರಲ್ಲಿ ಎಂತದೋ

ಒಂದು ವಾಸನೆ. ಮಳೆಗಾಲದಲ್ಲಿ ಡಬ್ಬದ ಮೇಲೆ ನೊರೆ ನೊರೆ. ಜನವರಿ ಬಂದರೆ ಆಲೆ ಮನೆಯಿಂದ ಸಿಗುವ ಜೋನಿ ಬೆಲ್ಲ, ಅದು ಬಿಟ್ಟರೆ ವರ್ಷವೆಲ್ಲಾ ಸಿಗುವ ಡಬ್ಬದೊಳಗಿನ ಬೆಲ್ಲ.

ಮಳೆಗಾಲ ಬಂತೆಂದರೆ 'ಕಟ್ಟೆ' ಎಂಬ ಕರಿ ಇರುವೆಗಳು, ಅವುಗಳನ್ನು ಗೊದ್ದ ಎಂದು ಕರೆಯುತ್ತಾರೆ, ಅವು ಬೆಲ್ಲದ ಡಬ್ಬದೊಳಗೆ ನುಗ್ಗಿ, ಅಲ್ಲಿಯೇ ಅವುಗಳ ಕಾಲು ಅಂಟಿಕೊಂಡು, ಹೊರಬರಲಾಗದೇ ಅಲ್ಲೇ ಗತಪ್ರಾಣವಾಗುತ್ತಿದ್ದವು. ಅಲ್ಲಿ ಎಂತಹದೋ ಒಂದು ವಾಸನೆ. ಹಾಗಂತ ಬೆಲ್ಲವನ್ನು ಚೆಲ್ಲಲಾಗುತ್ತದೆಯೇ? ಪಾಯಸದಿಂದ ಹಿಡಿದು, ಸುಕ್ಕಿನುಂಡೆಯವರೆಗೆ, ಕೃಷ್ಣಾಷ್ಟಮಿಯ ಗ್ವಾಯಿ ಬೀಜ (ಗೇರು ಬೀಜ)ದ ಉಂಡೆಯಿಂದ ಹಿಡಿದು, ತಂಬಿಟ್ಟು ಮತ್ತು ಎಳ್ಳುಂಡೆಯವರೆಗೆ ಅದೇ ನಮಗೆ ಸಿಹಿ. ಇದೇ ಬೆಲ್ಲವೂ ಎಲ್ಲಕ್ಕೂ ಬೇಕು.

ಆದರೆ ದಿನಸಿ ಅಂಗಡಿಗಳಲ್ಲಿ ಗಟ್ಟಿ ಬೆಲ್ಲ ದೊರೆಯುತ್ತಿತ್ತು ಎಂಬುದು ನನಗೆ ಗೊತ್ತಿತ್ತು. ಘನಾಕಾರದ ತುಸು ಹಳದಿ ಬಣ್ಣದ, ಕತ್ತರಿಸಿದರೆ ತುಂಡಾಗುವ ಈ ಬೆಲ್ಲವನ್ನು ಬಾಯಿಗೆ ಹಾಕಿಕೊಂಡರೆ ಅದು ಅಲ್ಲಿ ನಿಧಾನವಾಗಿ ಕರಗುತ್ತಿತ್ತು. ಖುಷಿಯೋ ಖುಷಿ. ಅದನ್ನು ಬಿಟ್ಟರೆ ಉಂಡೆ ಬೆಲ್ಲ, ದೊಡ್ಡ ಅಥವಾ ಚಿಕ್ಕ ಗಾತ್ರದ್ದು. ಆದರೆ ಅದನ್ನು ಕೊಡಿಸುವವರು ಯಾರು? ನನ್ನದೇ ಸಂಪಾದನೆ, ಅದೂ ಆ ವಯಸ್ಸಿನಲ್ಲಿ!

ಬಿರಾಮ್ರ ಮಾಣಿ ಎಂದು ಒಂದಿಷ್ಟು ಗೌರವವಿತ್ತು ನನಗೆ. ಬೆಳ್ಳಂಬೆಳಗ್ಗೆ, ಸೂರ್ಯರಾಯ ಏಳುವುದಕ್ಕೆ ಮೊದಲೇ ಎಬ್ಬಿಸಿ, ಸಿಹಿ ನಿದ್ರೆಯನ್ನು ಹಾಳು ಮಾಡಿ, ಅಮರ ಕೋಶದ 'ಯಸ್ಯಜ್ಞಾನ ದಯಾ ಸಿಂಧೋಃ' ಅನ್ನೋ, ಸೂಕ್ತದ 'ಸಹಸ್ರ ಶೀರ್ಷಾ ಪುರುಷಃ'ವನ್ನೋ ಬಾಯಿಪಾಠ ಮಾಡಿಸುತ್ತಿದ್ದರು ಅಪ್ಪಯ್ಯ. ಮಂತ್ರ-ತಂತ್ರಗಳು ಅನುಷ್ಠಾನದಲ್ಲಿ ಇರುತ್ತಿದ್ದುದರಿಂದಲೇ ಆ ಕಾಲದಲ್ಲಿ ಮಳೆ-ಬೆಳೆಗಳು ಸೂಕ್ತ ಸಮಯದಲ್ಲಿ ಆಗುತ್ತಿದ್ದವು ಎಂಬ ನಂಬಿಕೆಯಿತ್ತು.

ಇಂತಹ ಮಾಣಿಗೆ ದಕ್ಷಿಣೆ ಸಿಗದಿರುತ್ತದೆಯೇ? ಹೌದು, ಸಿಗುತ್ತದೆ, ಐದು ಪೈಸೆ, ಹೆಚ್ಚೆಂದರೆ ಹತ್ತು ಪೈಸೆ. ಹಿರಿಯರಿಗೆ ಹೆಚ್ಚು. ದಾನವೂ ಸಿಕ್ಕರೆ ಅದರ ಜೊತೆಗೆ ಇನ್ನಷ್ಟು ಹಣ. 'ದಕ್ಷಿಣಾಂ ಪ್ರತಿಪಾದಯಾಮಿ,' ಎಂದರಾಯಿತು. ಈ ಕಾಸುಗಳೂ ಅಂದಿನ ಕಾಲಕ್ಕೆ ಬಹು ದೊಡ್ಡ ಮೌಲ್ಯದವಾಗಿರುತ್ತಿದ್ದವು. ಉಟ್ಟ ಪಂಚೆಯನ್ನೇ ಒದ್ದೆ ಮಾಡಿ ಮಡಿ ಮಾಡಿಕೊಂಡು ಕರೆದಲ್ಲಿಗೆ ಹೋಗಿ ನಾಗನ ಕಲ್ಲಿನ ಮೇಲೆ ನೀರು ಸುರಿದು, ಎರಡು ಊದಿನ ಕಡ್ಡಿ ಹಚ್ಚಿ, ಬಂದಷ್ಟು ಮಂತ್ರ ಹೇಳಿ, ಆರತಿ ಎತ್ತಿಬಿಟ್ಟರೆ ಹತ್ತು ಪೈಸೆಗಳ ಕೂಲಿ ಸಿಗುತ್ತಿತ್ತು. ಸಾಕಲ್ಲ, ನನ್ನ ಬೆಲ್ಲ ಸೇವನೆಗೆ?

'ತೊಡು'ವಾದಾಗ ಹತ್ತು ಪೈಸೆ ಕೊಟ್ಟರೆ ಒಂದು ದೊಡ್ಡ ಅಚ್ಚೇ ಸಿಗುತ್ತಿತ್ತು: ಅಚ್ಛೇ ದಿನ್ ಎನ್ನುವಿರಾ? ಬಿದಕಲ್ಕಟ್ಟೆಯಿಂದ ಮನೆಗೆ ನಡೆದುಕೊಂಡು ಬರಲು ಅರ್ಧ ಗಂಟೆ ಬೇಕು. ಎಷ್ಟು ತಿಂದರೂ ಬೇಡ ಅನಿಸದ ಬೆಲ್ಲವನ್ನು, ಕೈ, ಬಾಯಿ ಎಲ್ಲಾ ಅಂಟು ಅಂಟು

ಮಾಡಿಕೊಂಡು ಸವಿಯುತ್ತಾ ಸಾಗಿ ಮನೆಗೆ ಬರುತ್ತಿದ್ದೆ. ಕೈ ತೊಳೆದುಕೊಳ್ಳುವುದಕ್ಕೆ ದಾರಿಯಲ್ಲೊಂದು 'ತೋಡು' ಇದೆಯಲ್ಲ.

ಇದು ನನ್ನ ದಿನನಿತ್ಯದ ಕಾಯಕವಾಗಿತ್ತು. ಐದು-ಹತ್ತು ಪೈಸೆಗಳು ಬೆಲ್ಲವಾಗಿ ಪರಿವರ್ತಿತವಾಗುತ್ತಿದ್ದವು. ಮತ್ತೂ ಹಣ ಉಳಿದರೆ ಬಣ್ಣದ ಗೋಲಿ ಸೋಡ, ಅದರೊಂದಿಗೆ ಸುಂಯ್ಯೆಂಬ ಸದ್ದು ಫ್ರೀ.

ಒಂದು ದಿನ ಹೊಟ್ಟೆಯಲ್ಲಿ ನೋವು ಕಾಣಿಸಿಕೊಂಡಿತು. ಈಗ ಜೋರಾಗಿ ಕಾಲು ಜಾರಿದರೆ ಒಂದಿಲ್ಲೊಂದು ಆಸ್ಪತ್ರೆ ಸಿಗುತ್ತದೆ, ಆದರೆ ಆಗ ಮನೆ ಮದ್ದೇ ಗಟ್ಟಿ. ಅಮ್ಮನಿಗೆ ಗೊತ್ತಾಯಿತು, ಇದು 'ಬ್ಯಲ್ಲ'ದ ಪ್ರಭಾವ ಅಂತ. ಅವಳು ಆಡುಸೋಗೆ ಸೊಪ್ಪಿನ ಕಷಾಯ ಮಾಡಿದಳು. ವಾಸನೆ ಬರುತ್ತಲೇ ದೂರ ಓಡಲು ಹವಣಿಸುತ್ತಿದ್ದ ನನ್ನನ್ನು ಎಳೆದುಕೊಂಡು ಬಂದು, ಮೂಗು ಒತ್ತಿ ಹಿಡಿದಳು. ಮೂಗು ಮುಚ್ಚಿದರೆ ಬಾಯಿ ತೆರೆಯಲಿರಲಾದೀತೇ? ಕಷಾಯವನ್ನು ಬಾಯಿಯಲ್ಲಿ ಸುರುವಿದಳು. ಬಾಯೆಲ್ಲಾ ಕಹಿ ಕಹಿ. ಆದರೂ ನೋವು ಕಡಿಮೆಯಾಗಲಿಲ್ಲ. ಒಂದಿಷ್ಟು ಬೈದಳು, ಬುದ್ಧಿ ಹೇಳಿದಳು. ಮಕ್ಕಳು ಹಿರಿಯರು ಹೇಳಿದ್ದನ್ನೆಲ್ಲಾ ಚಾಚೂ ತಪ್ಪದೇ ಪಾಲಿಸಿದ್ದರೆ ದೇಶ ಎಷ್ಟೋ ಬೆಳೆದು ಬಿಡುತ್ತಿತ್ತು. ಆದರೆ ಮಕ್ಕಳು ಒಳ್ಳೆಯ ಮಾತನ್ನು ಕೇಳುವುದಿಲ್ಲ, ಅನುಸರಿಸುವುದಂತೂ ಇಲ್ಲವೇ ಇಲ್ಲ.

ಅದೊಂದು ದಿನ. ಆಗೆಲ್ಲಾ ಮನೆಗಳಲ್ಲಿ ಕಕ್ಕಸು ಎಂಬ, ನಾಲ್ಕು ಗೋಡೆಗಳ ನಡುವೆ ಸೀಮಿತವಾದು ಜಾಗ ಇರಲೇ ಇಲ್ಲ. ಇಡೀ ಜಗತ್ತೇ ಶೌಚಾಲಯ. ಎಲ್ಲಿ ಬೇಕಾದರೂ ಕುಳಿತುಕೊಳ್ಳಬಹುದು, ಎಷ್ಟು ಹೊತ್ತು ಬೇಕಾದರೂ 'ಎಂಜಾಯ್' ಮಾಡಬಹುದು. ಯಾರೂ ಇನ್ನೂ ಆಗಿಲ್ಲವೇ, ಎಂದು ಕೇಳುವುದಿಲ್ಲ. ನೀರು ಯಾಕೆ ಹಾಕಿಲ್ಲ, ಎಂದು ಗದರುವುದಿಲ್ಲ.

ಕೈಲೊಂದು ನೀರು ತುಂಬಿದ ಚೆಂಬು ಹಿಡಿದು ದೂರಕ್ಕೆ ಹೊರಟರಾಯಿತು. ಈ ಕ್ರಿಯೆಗಾಗಿಯೇ ನಿಗದಿತ ಚೆಂಬೊಂದು ಇರುತ್ತಿತ್ತು, ತೆಗೆದುಕೊಂಡು ಮನೆಯ ಹಿಂದಿನ ಗದ್ದೆಗೆ ಹೋಗಿ ಕುಕ್ಕರು ಬಡಿದರೆ ಆಯಿತು. ಆ ದಿನ 'ಹಳು'ವೊಂದರ ಹಿಂದೆ ಕುಳಿತುಕೊಂಡೆ. ಕಕ್ಕಸು ಬರುವುದರ ಜೊತೆಗೆ ಏನೋ ಹೊರಬರುತ್ತಿದೆ ಎನಿಸಿತು. ನೋಡಿದರೆ ಹುಳು, ಬಿಳಿ ಬಣ್ಣದ್ದು, ನೇತಾಡುತ್ತಿತ್ತು. ಹೊಟ್ಟೆಯೊಳಗೆ ಹಾವು, ಏನೂ ತಿಳಿಯದೇ ಜೋರಾಗಿ ಕೂಗಿಕೊಂಡೆ, ಅಲ್ಲಲ್ಲ, ಕಿರಿಚಿಕೊಂಡೆ.

ಅಮ್ಮ ಓಡೋಡಿ ಬಂದಳು. ನನ್ನನ್ನು ನೋಡಿ ನಕ್ಕಳು. ಎರಡು ಕಡ್ಡಿಗಳನ್ನು ತೆಗೆದುಕೊಂಡು, ಆ ಹುಳವನ್ನು ಕೆಳಗೆ ಎಳೆದಳು. ಅದು ವಿಲವಿಲ ಒದ್ದಾಡಿ ಸತ್ತು ಹೋಯಿತು.

ಎಂದಳು, 'ಬೆಲ್ಲ ತಿಂದ್ರೆ ಹೀಂಗೇ ಆಪುದು, ನಾನು ಹೇಳಿದ್ದು ಕೇಂಡ್ಯಾ?'.

ಅಂದಿನಿಂದ ಬೆಲ್ಲವನ್ನು ಕಂಡಾಗೆಲ್ಲಾ ನನಗೆ ಈ ಕತೆ ನೆನಪಾಗುತ್ತದೆ. ಹಾಗಂತ ಬೆಲ್ಲವನ್ನು ಬಹಿಷ್ಕರಿಸಿದ್ದೇನೆಯೇ? ಅದೂ ಇಲ್ಲ. ಆಚಾರವಿಲ್ಲದ ನಾಲಿಗೆಯ ದಾಸರಾದವರಿಗೆ ಮುಂದಿನ ಚಿಂತೆ ಇರುವುದಿಲ್ಲ, ಅಲ್ಲವಾ?

✷

# ಸೀರೆ ಶಾಪಿನಲ್ಲೊಂದು ''ಸೀನು''

- ಎಂ.ಕೆ. ಭಾಸ್ಕರ ರಾವ್

ಬಟ್ಟೆ ಬರೆ ಅದರಲ್ಲೂ ಸೀರೆ ಎಂದರೆ ಅದು ನಾರೀಮಣಿಯರ ಹುಚ್ಚೂ ಹೌದು ಮಹಿಳಾಂಗನೆಯರ ಆ ಜನ್ಮಸಿದ್ಧ ಹಕ್ಕೂ ಹೌದು. ಈ ಹುಚ್ಚನ್ನು ಜಗತ್ತಿನ ಯಾವುದೇ ದೇಶದ ಯಾವುದೇ ಮೂಲೆಯ ಮಹಿಳೆಯರು ಗೆದ್ದ ನಿದರ್ಶನವಿಲ್ಲ. ಅದು ಸೀರೆಯೇ ಆಗಿರಬೇಕೆಂದೇನಿಲ್ಲ, ವಸ್ತ್ರವೈವಿಧ್ಯ ಬೇರೆಬೇರೆಯಾಗಿರಬಹುದು. ಆದರೆ ಹುಚ್ಚು ಮಾತ್ರ ಯಥಾವತ್.

''ನನ್ನ ಹೆಂಡತಿಯ ಕಣ್ಣಿಗೆ ಕಸ ಬಿದ್ದು ಡಾಕ್ಟರಲ್ಲಿಗೆ ಹೋಗಬೇಕಾಯಿತು. ನೂರು ರೂಪಾಯಿ ಖರ್ಚಾಯಿತು'' ಎಂದೊಬ್ಬ ಹೇಳಿದರೆ ''ಅಯ್ಯೋ ನನ್ನ ಹೆಂಡತಿಯ ಕಣ್ಣಿಗೆ ಸೀರೆಯೊಂದು ಬಿದ್ದು ಸಾವಿರ ರೂಪಾಯಿ ಕೈಬಿಟ್ಟು ಹೋಯಿತು'' ಎಂದು ಇನ್ನೊಬ್ಬ ಅಲವತ್ತುಕೊಂಡನಂತೆ. ಹಳೆಯ ಸವಕಲು ಜೋಕು ಇದು ಎನ್ನುವವರಲ್ಲಿ ನಾನೂ ಒಬ್ಬ. ಆದರೆ ಇದು ಜೋಕಷ್ಟೇ ಅಲ್ಲ ಸಾರ್ವಕಾಲಿಕ ಸತ್ಯವೂ ಆಗಿರುವುದರಿಂದ ಅದು ಮತ್ತೆ ಮತ್ತೆ ಚಲಾವಣೆಗೆ ಬರುತ್ತಲೇ ಇರುತ್ತದೆ. ನಮ್ಮ ಕಥಾ ನಾಯಕಿ ಇಂಥದೇ ಸೀರೆ ಹುಚ್ಚಿಗೆ ಸಿಕ್ಕುಬಿದ್ದ ಪ್ರಸಂಗ ಇದು:

ಮೈಸೂರಿನಲ್ಲಿ ಆ ಚಿತ್ರದ ಚಿತ್ರೀಕರಣ. ಬಿಸಿಲು ಏರುವುದಕ್ಕೆ ಮುನ್ನವೇ ಸನ್ನಿವೇಶದ ಚಿತ್ರೀಕರಣವನ್ನು ಮುಗಿಸುವುದು ನಿರ್ದೇಶಕ ಮತ್ತು ಛಾಯಾಗ್ರಾಹಕರ ನಿರ್ಧಾರವಾಗಿತ್ತು. ಅದಕ್ಕೆ ಮುಖ್ಯ ಕಾರಣ ಅದು ಜನ ನಿಬಿಡ ಮಾರ್ಕೆಟ್ ಪ್ರದೇಶವಾಗಿದ್ದುದು. ಸಿನಿಮಾ ಚಿತ್ರೀಕರಣ ಎಂದಾಕ್ಷಣ ಅದನ್ನು ನೋಡಲು, ನಟನಟಿಯರನ್ನು ಕಣ್ತುಂಬಿಕೊಳ್ಳಲು ಜನ ಗುಂಪುಗೂಡುತ್ತಾರೆ. ಇಲ್ಲದ ಕಿರಿಕಿರಿ ಎಂಬ ವಾಸ್ತವ ಈ ನಿರ್ಧಾರಕ್ಕೆ ಪುಷ್ಟಿ ನೀಡಿತ್ತು.

ಆ ದಿನದ ಉದ್ದೇಶಿತ ಚಿತ್ರೀಕರಣದ ಸನ್ನಿವೇಶ: ನಾಯಕಿ ಸೀರೆ ಅಂಗಡಿಯೊಳಗೆ ಹೋಗಿ ಸೀರೆಗಳನ್ನು ಕೊಳ್ಳುವುದು. ಆಕೆ ಒಳಕ್ಕೆ ಹೋಗುವುದನ್ನು ಮತ್ತು ಹೊರಕ್ಕೆ ಬರುವುದನ್ನು ಒಮ್ಮೆಗೇ ಚಿತ್ರೀಕರಿಸಲು ಛಾಯಾಗ್ರಾಹಕ ಅಣಿಯಾದ. ಸನ್ನಿವೇಶದ ವಿವರವನ್ನು ನಟಿಗೆ ಸಹಾಯಕ ನಿರ್ದೇಶಕ ನೀಡಿದ. ''ನೀವು ನಿಮ್ಮ ಗೆಳತಿಯರೊಂದಿಗೆ ಬರುತ್ತೀರಿ, ಡಿಸ್ಕೌಂಟ್ ಸೇಲ್ ಬೋರ್ಡ್ ನಿಮ್ಮ ಗಮನ ಸೆಳೆಯುತ್ತದೆ. ಒಳಕ್ಕೆ ಹೋಗುತ್ತೀರಿ. ಅಲ್ಲಿಗೆ ಆ ಶಾಟ್ ಮುಗಿಯುತ್ತದೆ. ಎರಡೇ ನಿಮಿಷದಲ್ಲಿ ಖರೀದಿಸಿದ ಸೀರೆಯಿರುವ ಕ್ಯಾರಿ ಬ್ಯಾಗ್ ಹಿಡಿದು ಹೊರಕ್ಕೆ ಬರುತ್ತೀರಿ. ಹೀಗೇ ಹೋಗಿ ಹಾಗೇ ಹಿಂದಕ್ಕೆ ಬಂದುಬಿಡಿ. ಎದುರು ಕಟ್ಟಡದ ಹೆಂಚಿನ ಮಾಡಿನ ಮೇಲೆ ಕ್ಯಾಮೆರಾ ಇದೆ. ಎಂಟ್ರಿ ಮತ್ತು ಎಕ್ಸಿಟ್ ದೃಶ್ಯಗಳನ್ನು ಐದು ನಿಮಿಷದಲ್ಲಿ ಚಿತ್ರೀಕರಿಸಿದ ನಂತರ

ಕ್ಯಾಮೆರಾಮನ್ ಕೆಳಕ್ಕೆ ಇಳಿಯುತ್ತಾರೆ. ನಂತರ ಅಂಗಡಿಯ ಒಳಗಿನ ದೃಶ್ಯಗಳನ್ನು ಮತ್ತೆ ಚಿತ್ರೀಕರಿಸಲಾಗುವುದು....'' ಎಂದೆಲ್ಲ ಆತ ವಿವರಿಸಿದ. ಎಲ್ಲ ಗೊತ್ತಾಯಿತೆಂಬಂತೆ ನಟಿ ಗೋಣು ಹಾಕಿದರು.

ಓಡು ಹೆಂಚಿನ ಮನೆ ಅದು. ನೋಡಿದರೆ ಅಪಾಯ ಎನ್ನಿಸುವಂಥ ನೂರು ವರ್ಷ ದಾಟಿದ ಹಳೇ ಹಳೇ ಮನೆ. ಅದರ ಮಾಲಿಕನನ್ನು ಒಪ್ಪಿಸಿ ಚಿತ್ರೀಕರಣಕ್ಕೆ ವ್ಯವಸ್ಥೆ ಮಾಡಿಕೊಂಡಿದ್ದರು. ಕ್ಯಾಮೆರಾ ಹಿಡಿದು ಸಹಾಯಕ ಛಾಯಾಗ್ರಾಹಕ ಮೊದಲೇ ಮಾಡಿನ ಮೇಲೆ ಕುಳಿತಿದ್ದ. ಭದ್ರವಾದ ಏಣಿಯ ಸಹಾಯದಿಂದ ಛಾಯಾಗ್ರಾಹಕ, ನಿರ್ದೇಶಕರಿಬ್ಬರೂ ಮಾಡು ಏರಿದರು. ನಿರ್ದೇಶಕರು ಸಾವರಿಸಿಕೊಂಡು ಕುಳಿತರು. ಆದರೆ ಛಾಯಾಗ್ರಾಹಕರಿಗೆ ಅಷ್ಟೆಲ್ಲ ಸುಲಭವಾಗಿ ಕೂರುವುದು ಸಾಧ್ಯವಿರಲಿಲ್ಲ.

ಕಾಲು ತುಸು ಊನವಾಗಿದ್ದ ಅವರಿಗೆ ಕುಕ್ಕುರು ಕಾಲಿನಲ್ಲಿ ಕೂರುವುದು ಸಾಧ್ಯವೇ ಇರಲಿಲ್ಲ. ಆದರೆ ತಾವೇ ಸಂಯೋಜಿಸಿದ ಶಾಟ್ ಆಗಿದ್ದುದರಿಂದ ತ್ರಾಸನ್ನು ಅನುಭವಿಸುತ್ತ ಕ್ಯಾಮೆರಾ ಹಿಂದೆ ಕುಳಿತರು. ಅತ್ತ ಬೀದಿಯಲ್ಲಿ ನಾಯಕಿ ಗೆಳತಿಯರೊಂದಿಗೆ ಕಿಲಿಕಿಲ ನಗುತ್ತ ಅದೂ ಇದೂ ಹರಟುತ್ತ ಬಂದರು. ನಿರ್ದೇಶಕರು ಸಮಯ ನೋಡಿ ಕ್ಯಾಮೆರಾ ಸ್ಟಾರ್ಟ್, ಆಕ್ಷನ್ ಎಂದರು. ನಟಿಯರತ್ತ ವಾಲಿದ ಕ್ಯಾಮೆರಾ ಆ ಗುಂಪನ್ನು ಹಾಗೇ ಅಂಗಡಿ ಬಾಗಿಲವರೆಗೂ ಅನುಸರಿಸಿತು. ಕಲಾವಿದೆಯರೆಲ್ಲ ಅಂಗಡಿ ಒಳಗೆ ಐಕ್ಯರಾಗುತ್ತಿದ್ದಂತೆ ನಿರ್ದೇಶಕರು ಕಟ್ ಎಂದರು. ನಾಯಕಿಯ ಮುಖದ ಮೇಲೆ ಆರಂಭಗೊಂಡ ಸೀನು ಆಕೆ ಅಂಗಡಿಯೊಳಗೆ ಹೋಗುತ್ತ ಕರಗುತ್ತ ನಂತರ ಆಕೆಯುಟ್ಟ ಕಾಟನ್ ಸೀರೆಯ ಪಲ್ಲಿನ ಅಂಚನ್ನು ಚಿತ್ರೀಕರಿಸುವುದರೊಂದಿಗೆ ಮುಗಿದಿತ್ತು. ಒಂದೇ ಶಾಟ್‌ನಲ್ಲಿ ಸೀನ್ ಓಕೆ ಆಗಿದ್ದಕ್ಕೆ ನಿರ್ದೇಶಕರಿಗಂತೂ ಮಟಮಟ ಮಧ್ಯಾಹ್ನದ ಸೆಖೆಯಲ್ಲಿ ತಣ್ಣನೆಯ ಬಿಯರ್ ಹೀರಿದಷ್ಟು ಖುಷಿಯಾಗಿತ್ತು.

ನಂತರದ್ದು ಅಂಗಡಿಯಿಂದ ನಾಯಕಿ ಹೊರಬರುವ ಸೀನು. ಅದಕ್ಕೆ ಎರಡು ನಿಮಿಷದ ಕಾಲಾವಕಾಶವೂ ಇರಲಿಲ್ಲ. ಅದನ್ನು ಚಿತ್ರೀಕರಿಸಿ ಕ್ಯಾಮೆರಾವನ್ನು ಕೆಳಕ್ಕೆ ತಂದು ಅಂಗಡಿಯೊಳಗೆ ನಟಿ ಸೀರೆ ಆಯ್ಕೆ ಮಾಡುವುದನ್ನು ಚಿತ್ರೀಕರಿಸಬೇಕಿತ್ತು. ಅದೆಲ್ಲವೂ ಕ್ಲೋಸ್‌ಅಪ್ ಸೀನುಗಳು. ನಿರ್ದೇಶಕರು ಮಾಡಿನಿಂದ ಕೆಳಕ್ಕೆ ಬಂದಿದ್ದರು. ಕ್ಯಾಮೆರಾ ಸಿದ್ಧ ಮಾಡಿಕೊಂಡು ಕುಳಿತ ಛಾಯಾಗ್ರಾಹಕ ಕುಳಿತ ಜಾಗದಲ್ಲಿಯೇ ಕಾಲನ್ನು ಹಿಂದೆಮುಂದೆ ಮಾಡಿಕೊಂಡು ಉಸಿರ್ಗರೆದರು. ಅಷ್ಟು ಹೊತ್ತಿಗೆ ಬಿಸಿಲು ಹೆಚ್ಚಲಾರಂಭವಾಗಿತ್ತು. ಅದು ಮೇ ತಿಂಗಳ ದಿನವಾದ್ದರಿಂದ ಸೆಖೆ ಉಗ್ರಪ್ರತಾಪ ಚುರುಕು ಮುಟ್ಟಿಸುತ್ತಿತ್ತು.

ಛಾಯಾಗ್ರಾಹಕ ಸೆಖೆಯಲ್ಲಿ ಮುಲುಗಿದರು. ಕುಡಿಯಲು ನೀರು ತರಲಿಲ್ಲ ಎನ್ನುವುದು ಗಮನಕ್ಕೆ ಬಂದು ಹೇಳಿದರೆ ಯಾರೂ ಕೇಳಿಸಿಕೊಳ್ಳಲಿಲ್ಲ. ಕ್ಯಾಮೆರಾ ಹಿಡಿದು ಕುಳಿತಿದ್ದ ಸಹಾಯಕನನ್ನು ಕಳಿಸುವಂತೆಯೂ ಇರಲಿಲ್ಲ. ಅದು ಮೊಬೈಲ್ ಯುಗವಲ್ಲ.

ಸೀನಿನ ಚಿತ್ರೀಕರಣವನ್ನು ಬೇಗ ಮುಗಿಸಿ ಕೆಳಗಿಳಿದು ನೀರು ಕುಡಿದರಾಯಿತೆಂದು ಛಾಯಾಗ್ರಾಹಕ ನಟಿಯ ಎಕ್ಸಿಟ್‌ಗೆ ಚಾತಕ ಪಕ್ಷಿಯಾದರು.

ಕಾದೇ ಕಾದರೂ ನಟೀಮಣಿ ಮಾತ್ರ ಊಹೂಂ ಹೊರ ಬರಲೇ ಇಲ್ಲ. ಏಕೆ ಎಂದು ಯಾರನ್ನು ಕೇಳಬೇಕು. ಅತ್ತಿತ್ತ ಕಣ್ಣು ಹಾಯಿಸಿದರೆ ನಿರ್ದೇಶಕರೂ ಕಾಣಿಸಲಿಲ್ಲ. ಆ ದಿನ ಚಿತ್ರೀಕರಣ ನಡೆಯಬೇಕಿದ್ದ ಮತ್ತೊಂದು ಲೊಕೇಶನ್‌ಗೆ ಅವರು ಹೋಗಿದ್ದರು ಎನ್ನುವುದು ಛಾಯಾಗ್ರಾಹಕರಿಗೆ ಗೊತ್ತಾಗುವ ವೇಳೆಗೆ ಅವರ ಸಹನೆಯ ಕಟ್ಟೆ ಒಡೆದಿತ್ತು. ಮೇಲಿನಿಂದ ಅಬ್ಬರಿಸಿ ಕೂಗುವುದು ಶಿಷ್ಟಾಚಾರ ಅಲ್ಲ ಎಂದು ಭಾವಿಸಿ ಬಿಸಿಲಿಗೆ ತಲೆಯೊಡ್ಡಿ ಕುಳಿತರು. ಸಿಟ್ಟು ನೆತ್ತಿಗೆ ಏರಿ ಬಿಸಿಲ ಜೊತೆ ಮಾತುಕತೆಯಾಡಲಾರಂಭಿಸಿತ್ತು.

ಇತ್ತ ಅಂಗಡಿಯೊಳಗಿನ ಸೀನೇ ಬೇರೆಯಾಗಿತ್ತು. ಒಳಕ್ಕೆ ಹೋದ ನಟಿಗೆ ತಾನು ತಕ್ಷಣವೇ ಇನ್ನೊಂದು ಸೀನಿಗಾಗಿ ಅಂಗಡಿಯಿಂದ ಹೊರಕ್ಕೆ ಬರಬೇಕೆನ್ನುವುದು ನೆನಪಿದ್ದರೂ ಬಣ್ಣ ಬಣ್ಣದ ನೂರಾರು ಸೀರೆಗಳ ರಾಶಿ ಅವರ ಸ್ಮೃತಿಗೆ ಗ್ರಹಣ ಬಡಿದಿತ್ತು. ಎಷ್ಟೆಂದರೂ ಬಂದವರು ಸಿನಿಮಾ ನಟಿ. ಅಂಗಡಿಯ ಸೇಲ್ಸ್ ಗರ್ಲ್ಸ್, ಬಾಯ್ಸ್ ಪೈಪೋಟಿಯಲ್ಲಿ ಸೀರೆಗಳನ್ನು ನಟಿಯ ಮುಂದೆ ಹರಡಿದರು. ಇದು ಮೊಳಕಾಲ್ಮುರು, ಇದು ಪೂಚಂಪಲ್ಲಿ, ಅದೇ...? ಮೈಸೂರು ಸಿಲ್ಕು, ಇವೆಲ್ಲ ಕಾಂಜೀವರಂ, ಅಲ್ಲಿ ಮೇಲಿರೋದೆಲ್ಲವೂ ಬನಾರಸ್, ಪಕ್ಕದ್ದು ಗದ್ವಾಲು... ನೋಡುತ್ತ ನೋಡುತ್ತ ನಟೀಮಣಿಯ ಕಣ್ಣೆರಡೂ ಅಲ್ಲೇ ಹೂತು ಹೋಗಿತ್ತು, ವಿವರಣೆಗೆ ಎರಡೂ ಕಿವಿಗಳು ಜೋತುಬಿದ್ದಿದ್ದವು.

ಸಹಾಯಕ ನಿರ್ದೇಶಕ ಎಕ್ಸಿಟ್ ಸೀನಿನ ಮಹತ್ವ ಹೇಳ ಬಂದರೆ ''ಇರು ಒಂದೈದು ನಿಮಿಷ... ನಾನೇನು ಓಡಿ ಹೋಗ್ತೇನಾ...'' ಎಂದರಾಕೆ. ಅತ್ತ ಛಾಯಾಗ್ರಾಹಕ ಕುದಿಯಲಾರಂಭಿಸಿದ. ಸುದ್ದಿ ತಿಳಿದ ನಿರ್ದೇಶಕ ಧಾವಿಸಿದರು. ಛಾಯಾಗ್ರಾಹಕ ಇನ್ನೇನು ಏಣಿಯ ನೆರವಿನಿಂದ ಕೆಳಕ್ಕೆ ಇಳಿದು ''ಪ್ಯಾಕ್ ಅಪ್'' ಅನ್ನುವ ಹಂತ ಅದು. ನಿರ್ದೇಶಕನ ಆದೇಶ, ಛಾಯಾಗ್ರಾಹಕನ ಬಾಯಿಂದ ಬರುವ ಸನ್ನಿವೇಶ. ನಿರ್ದೇಶಕ ಧಾವಿಸಿದವರೇ ಗುರ್ರೆಂದರು. ನಟಿ ಬಾಲ ಮುದುರಿಕೊಂಡು ಸೀನಿಗೆ ಅಣಿಯಾದರು ಎಂಬಲ್ಲಿಗೆ ಈ ಪ್ರಸಂಗ ಮುಕ್ತಾಯವು.

✷

## ಏನದು?

ಮಗಳು: ಅಪ್ಪಾ, ಎಷ್ಟೋ ಸಲ ನೀನು ನನಗೆ ಕೊಡಬೇಕು ಅಂದುಕೊಂಡಿದ್ದಾಗಲೂ ಕೊಡದೇ ಇದ್ದಿದ್ದು ಏನು?

ತಂದೆ ಅವಳ ಕೆನ್ನೆಗೆ ಮೃದುವಾಗಿ ಒಂದು ಏಟು ಬಿಗಿದ.